ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4   ಸಂಚಿಕೆ 25   ಜೂನ್ 27, 1982   ಬೆಲೆ 60 ಪೈಸೆ

ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿಯ ಸದಸ್ಯರ ಮತ್ತು ಪದಾಧಿಕಾರಿಗಳ ಗಮನಕ್ಕೆ

ಕೇಂದ್ರದ ಕರೆಯ ಮೇರೆಗೆ ರಾಜ್ಯ ಸಮಿತಿಯ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಯವರು ತುರ್ತಾಗಿ ನವದೆಹಲಿಗೆ ಹೋಗಬೇಕಾಗಿರುವುದರಿಂದ ಬೆಂಗಳೂರಿನಲ್ಲಿ 29-6-82 ರಂದು ನಡೆಯಬೇಕಾಗಿದ್ದ ಪದಾಧಿಕಾರಿಗಳ ಸಭೆಯನ್ನು 3-7-82ಕ್ಕೂ, 30-6-82 ರಂದು ನಡೆಯಬೇಕಾಗಿದ್ದ ರಾಜ್ಯ ಸಮಿತಿಯ ಸಭೆಯನ್ನು 4-7-82ಕ್ಕೂ ಮುಂದೂಡಲಾಗಿದೆ. ಸ್ಥಳ ಮತ್ತು ವೇಳೆಗಳಲ್ಲಿ ಬದಲಾವಣೆ ಇರುವುದಿಲ್ಲ.

ಸಿ. ನಂಜುಂಡಪ್ಪ
ಪ್ರಧಾನ ಕಾರ್ಯದರ್ಶಿ

ರಾಠೋಡರಿಗೆ ಅರ್ಧಚಂದ್ರ

ಕೆ.ಪಿ.ಸಿ.ಸಿ.ಯ ಅಧ್ಯಕ್ಷ ಸ್ಥಾನದಿಂದ ಕೆ. ಟಿ. ರಾಠೋಡರ ಪದಚ್ಯುತಿ ಏಕ ವ್ಯಕ್ತಿ ಸರ್ವಾಧಿಕಾರಿ ಪಕ್ಷ ಕರ್ನಾಟಕದ ಕಾಂಗ್ರೆಸ್ ಸಂಸ್ಥೆಗೆ ಕೊಟ್ಟ ಮಹಾ ಕೊಡುಗೆ. ಹಾಗೆಯೇ ಒಂದು ವ್ಯಕ್ತಿಯ ಸಾರ್ವಭೌಮತ್ವದಲ್ಲಿರುವ ರಾಜಕೀಯ ಪಕ್ಷ ಯಾವ ರೀತಿಯಲ್ಲಿ ಪಕ್ಷವನ್ನು ನಡೆಸಿಕೊಳ್ಳುತ್ತಿದೆ, ಶಿಸ್ತು ಪಾಲಿಸುತ್ತಿದೆಯೆಂಬುದರ ಪ್ರತೀಕ.

ಹಲವಾರು ವರ್ಷಗಳಿಂದಲೂ ಕಾಂಗ್ರೈ ಪಕ್ಷದಲ್ಲಿ, ಎ.ಐ.ಸಿ.ಸಿ. ಯಿಂದ ಹಿಡಿದು ವರ್ಕಿಂಗ್ ಕಮಿಟಿ, ರಾಜ್ಯ ಕಮಿಟಿ, ಜಿಲ್ಲಾ ಕಮಿಟಿ, ತಾಲ್ಲೂಕ್ ಹಾಗೆಯೇ ಕೆಳಮಟ್ಟದಲ್ಲೂ ಚುನಾವಣೆಗಳೇ ನಡೆಯುತ್ತಿಲ್ಲ. ಇಂದಿರಾ

ಸಂಪಾದಕೀಯ

ಗಾಂಧಿಯವರೇ ಅಖಿಲ ಭಾರತ ಕಾಂಗ್ರೈಯ ಕಾಯಂ ಅಧ್ಯಕ್ಷರಾಗಿದ್ದು, ಅವರೇ ರಾಜ್ಯದ ಕಮಿಟಿಗಳ ಅಧ್ಯಕ್ಷರನ್ನು ನೇಮಿಸುವ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಇಂದಿರಾ ಗಾಂಧಿಯವರು ತಮ್ಮ ಪಕ್ಷದಲ್ಲಿ ಪ್ರಜಾಪ್ರಭುತ್ವವೆಂಬುದನ್ನೇ ಉಳಿಸಿಲ್ಲ. ತಮಗೆ ಬೇಕಾದಾಗ, ತಮ್ಮ ಮನಸ್ಸಿಗೆ ಬಂದವರನ್ನು ಅಧಿಕಾರಕ್ಕೇರಿಸುವುದು ಹಾಗೆಯೇ ಬೇಡಾದಾಗ ಅಂಥವರನ್ನು ಅಧಿಕಾರದಿಂದಿಳಿಸುವುದೇ ಕಾಂಗ್ರೈಯಲ್ಲಿಯ ಪ್ರಜಾಪ್ರಭುತ್ವವಾಗಿದೆ. ರಾಜ್ಯದ ಮುಖ್ಯಮಂತ್ರಿಗಳನ್ನು ಆರಿಸುವಲ್ಲಿಯೂ, ಮಂತ್ರಿಗಳನ್ನು ನೇಮಿಸುವಲ್ಲಿಯೂ ಇಂದಿರಾ ಗಾಂಧಿಯವರದೇ ಕೊನೆ ನಿರ್ಣಯ.

ಇಂದಿರಾ ಗಾಂಧಿಯವರು ತನ್ನ ರಾಜಕೀಯ ಪಕ್ಷದಲ್ಲಿ ಮತ್ತು ಆಡಳಿತೆಯಲ್ಲಿ ಏಕ ವ್ಯಕ್ತಿ ಸರ್ವಾಧಿಕಾರ ನಡೆಸುತ್ತಿರುವುದನ್ನು ಮಾರ್ಕ್ಸ್‌ವಾದಿ

(8ನೇ ಪುಟ ನೋಡಿ)

ಪಾಲಿಟ್‌ಬ್ಯೂರೋ ಕರೆ

ಪ್ಯಾಲಿಸ್ತೇನಿಯರನ್ನು ಬೆಂಬಲಿಸಿ

ಪ್ಯಾಲೆಸ್ತೇನಿಯನ್ ಅರಬರ ವಿಮೋಚನಾ ಚಳುವಳಿಯನ್ನು ದಮನ ಮಾಡುತ್ತಿರುವ ಇಸ್ರೇಲಿನ ಜನಾಂಗವಾದಿ ನೀತಿಯನ್ನು, ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷದ ಪಾಲಿಟ್ ಬ್ಯೂರೊ ಖಂಡಿಸಿದೆ. ಇಸ್ರೇಲಿನ ಸರ್ವತೋಮುಖ ದಾಳಿಯಿಂದ ಬರಿಯ ಪ್ಯಾಲಿಸ್ತೇನಿಯನ್ ಶಕ್ತಿ ಮಾತ್ರವಲ್ಲ ಸಹಸ್ರಾರು ನಾಗರೀಕರ ಜೀವ ಹತ್ಯೆಯಾಗುತ್ತಿದೆ. ಇದು ಹಿಂದೆಂದೂ ಕೇಳಿರದಂತಹ ಹೇಯಕೃತ್ಯವಾಗಿದೆ.

ಇಂತಹ ರಕ್ತಪಾತಕ್ಕೆ ರಾಜಕೀಯವಾಗಿ ನೈತಿಕವಾಗಿ ಶಸ್ತ್ರಾಸ್ತ್ರಗಳಿಂದ ಬೆಂಬಲ ನೀಡುತ್ತಿರುವ ಅಮೇರಿಕನ್ ಸಾಮ್ರಾಜ್ಯಶಾಹಿಯನ್ನು ಪಾಲಿಟ್ ಬ್ಯೂರೊ ವಿರೋಧಿಸುತ್ತದೆ. ಈ ಸಾಮ್ರಾಜ್ಯಶಾಹಿಯ ಬೆಂಬಲವಿರದಿದ್ದಲ್ಲಿ ಇಸ್ರೇಲ್ ಇಂಥ ದುಷ್ಕಾರ್ಯಕ್ಕೆ ಕೈಹಾಕುವ ಕೆಲಸವನ್ನು ಮಾಡುತ್ತಿರಲಿಲ್ಲ.

ಅನೇಕ ಅರಬ್ ರಾಷ್ಟ್ರಗಳು ಪ್ಯಾಲಿಸ್ತೇನ್ ವಿಮೋಚನಾ ಹೋರಾಟಕ್ಕೆ ಬರಿಯ ಮಾತಿನ ಬೆಂಬಲವನ್ನು ಸೂಚಿಸಿದ್ದರೂ, ಹೋರಾಟದ ಕಣದಲ್ಲಿ ಪ್ಯಾಲಿಸ್ತೇನಿಯರು ಮಾತ್ರ ಉಳಿದಿದ್ದಾರೆಂಬುದು ವಾಸ್ತವದ ಸಂಗತಿಯಾಗಿದೆ. 1973ರಲ್ಲಿ ಸ್ವಲ್ಪ ಮಟ್ಟಿನ ಐಕ್ಯತೆ ಕಂಡು ಬಂದಿದ್ದರೂ ನಂತರದ ಅನ್ವರ್ ಸಾದತರ ದ್ರೋಹ, ಕ್ಯಾಂಪ್ ಡೇವಿಡ್ ಒಪ್ಪಂದದಿಂದ ಇದು ಸಡಿಲವಾಯಿತು. ಅನೇಕ ಅರಬ್ ರಾಷ್ಟ್ರಗಳು ಅಮೇರಿಕನ್ ಸಾಮ್ರಾಜ್ಯಶಾಹಿಯನ್ನು ಎದುರು ಹಾಕಿಕೊಳ್ಳಲು ಮುಂಬರುತ್ತಿಲ್ಲ. ಇದೆಲ್ಲದರ ಫಲವಾಗಿ ಬೆಗಿನ್ ಮತ್ತು ಅನುಯಾಯಿಗಳು ವಿಮೋಚನಾ ಚಳುವಳಿಯನ್ನು ಸಂಪೂರ್ಣವಾಗಿ ಮಟ್ಟಹಾಕುವ ಯೋಜನೆ ಹಾಕಿವೆ. ಈ ಯೋಜನೆಯಲ್ಲಿ ಇಸ್ರೇಲ್ ಏನಾದರೂ ಯಶಸ್ವಿಯಾಗುತ್ತಿದ್ದರೆ ಅದು ಅರಬ್‌ನ ಪ್ರತಿಗಾಮಿ ಆಳ್ವಿಕೆಯೇ ಕಾರಣವಾಗಿದೆ.

ಪ್ಯಾಲಿಸ್ತೇನಿಯರು ಮಾತ್ರ ತಮ್ಮ ಹೋರಾಟವನ್ನು ಅಚಲವಾದ ನಿರ್ಧಾರದಿಂದ, ಎಲ್ಲ ತ್ಯಾಗಕ್ಕೂ ಸಿದ್ಧರಾಗಿ ಮುಂದುವರಿಸುತ್ತಿದ್ದಾರೆ. ಹೋರಾಟದ ಧೀಮಂತ ನಾಯಕ ಯಾಸೆರ್ ಅರಾಫತ್ ತಮ್ಮನ್ನು ಬೆಂಬಲಿಸುವಂತೆ ಅಲಿಪ್ತ ಚಳುವಳಿಯ ಎಲ್ಲಾ ಜನತೆಗೆ ಮನವಿ ಮಾಡಿದ್ದಾರೆ.

ಸಾಮ್ರಾಜ್ಯಶಾಹಿ ವಿರೋಧಿಗಳು, ಮತ್ತು ಸ್ವಾತಂತ್ರ ಪ್ರೇಮಿ ಜನವಿಭಾಗ ಈ ಹೋರಾಟವನ್ನು ಹೃತ್ಪೂರ್ವಕವಾಗಿ ಬೆಂಬಲಿಸಿವೆ.

ಪ್ಯಾಲೆಸ್ತೇನಿಯನ್‌ರನ್ನು ಬೆಂಬಲಿಸಿ ಇದೇ ಜೂನ್ 28 ರಂದು ಐಕ್ಯತಾ ದಿನವನ್ನು ಆಚರಿಸಲು ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷದ ಪಾಲಿಟ್ ಬ್ಯೂರೊ ಕರೆ ನೀಡಿದೆ. ಆ ದಿನ, ಎಲ್ಲಾ ಸ್ವಾತಂತ್ರ್ಯ ಪ್ರೇಮಿಗಳನ್ನು, ಮತ್ತು ಸಂಘಗಳನ್ನು ಒಗ್ಗೂಡಿಸಿ ಬೃಹತ್ ಪ್ರದರ್ಶನವನ್ನು ದೇಶದಾದ್ಯಂತ ಏರ್ಪಡಿಸಬೇಕೆಂದು ಕರೆ ನೀಡಿದೆ.

ರಾಜ್ಯದ ಎಲ್ಲಾ ಕಾರ್ಮಿಕ ಸಂಘಟನೆಗಳೂ ಪಕ್ಷದ ಕಾರ್ಯಕರ್ತರು ಈ ಪ್ರದರ್ಶನವನ್ನು ಯಶಸ್ವಿಯಾಗಿ ನೆರವೇರಿಸಬೇಕೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

●

ಕರ್ನಾಟಕ ಬೀಡಿ ಕಾರ್ಮಿಕರಿಗೆ ತಾ|| ೧-೮-೧೯೭೮ ರಿಂದ ಪ್ರಾವಿಡೆಂಟ್ ಫಂಡ್ ಸ್ಕೀಂ ಜ್ಯಾರಿ

ಕರ್ನಾಟಕ ರಾಜ್ಯದ ಐದು ಲಕ್ಷ ಬೀಡಿ ಕಾರ್ಮಿಕರಿಗೆ ತಾ|| 1-8-78 ರಿಂದ ಪೂರ್ವಾನ್ವಯವಾಗುವಂತೆ ಪ್ರಾವಿಡೆಂಟ್ ಫಂಡ್ ಜ್ಯಾರಿಮಾಡಲು ಮಾಲಿಕರ, ಕಾರ್ಮಿಕರ ಮತ್ತು ಸರಕಾರಿ ಅಧಿಕಾರಿಗಳ ಜಂಟೀ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಜಿಲ್ಲಾ ಪೋಲಿಸ್ ಅಧಿಕಾರಿ ಶ್ರೀ ಬಿ ವೈ. ಬೋಸ್ಲೆಯವರ ಕಚೇರಿಯಲ್ಲಿ ಜೂನ್ 21 ರಂದು, ಜಿಲ್ಲಾಧಿಕಾರಿ ಶ್ರೀ ಎಸ್. ಕೆ. ದಾಸ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ತೀರ್ಮಾನವನ್ನು ಕೈಗೊಳ್ಳಲಾಯಿತು. ಸಭೆಯಲ್ಲಿ ಭಾರತ್ ಬೀಡಿಯ ಪರವಾಗಿ ಶ್ರೀ ಗಣಪತಿ ಪೈ ಮತ್ತು ಅಡ್ವೊಕೇಟ್ ಶ್ರೀ ಕಾರ್ನಾಡು ಶಶಿಧರ ರಾವ್, ಪ್ರಕಾಶ್ ಬೀಡಿಯ ಪರವಾಗಿ ಶ್ರೀ ರಾಮದಾಸ್ ಪೈ. ಸುವಾಸಿನಿ ಬೀಡಿಯ ಪರವಾಗಿ ಶ್ರೀ ಯು. ಗೋಪಾಲಕೃಷ್ಣ ನಾಯಕ್, ಟೆಲಿಫೋನ್ ಬೀಡಿಯ ಪರವಾಗಿ ಶ್ರೀ ಕಾಂತಿಲಾಲ್ ಪಟೇಲ್ ಮತ್ತು ಗ್ರೇಟ್ ದರ್ಬಾರ್ ಬೀಡಿ ಪರವಾಗಿ ಶ್ರೀ ಪಾಂಡುರಂಗ ಪೈ ಕಸ್ತೂರಿ ಭಾಗವಹಿಸಿದ್ದರು. ಬೀಡಿ ಕಾರ್ಮಿಕರ ಪರವಾಗಿ ಸಿ.ಐ.ಟಿ.ಯು. ಪ್ರತಿನಿಧಿಗಳಾದ ಕಾಂ| ಪಿ. ರಾಮಚಂದ್ರ ರಾವ್, ಕಾಂ| ಕೆ ಮೂಸಬ್ಬ, ಕಾಂ| ಬಿ. ಮಾಧವ, ಕಾಂ| ಕೆ. ಆರ್. ಶ್ರೀಯಾನ್, ಕಾಂ| ಎಚ್. ಗೋಪಾಲ, ಕಾಂ| ಜೆ. ವೀರಪ್ಪ, ಕಾಂ| ಯು. ಬಿ. ಮಾರಪ್ಪ, ಕಾಂ| ಲೋಕಯ್ಯ ಶೆಟ್ಟಿ, ಕಾಂ| ಬಾಬು ದೇವಾಡಿಗ, ಕಾಂ| ಪದ್ಮಾವತಿ, ಕಾಂ| ಯಮುನ ವಿ. ಸಾಲಿಯಾನ್ ಮತ್ತು ಕಾಂ| ಕಮಲ ಭಾಗವಹಿಸಿದ್ದರು.

ಕರ್ನಾಟಕದ ರೀಜನಲ್ ಪ್ರಾವಿಡೆಂಟ್ ಫಂಡ್ ಕಮೀಶನರ್ ಶ್ರೀ ಹರಿದಾಸ್ ಆಚಾರ್ ಅವರು ತಮ್ಮ ಇಲಾಖೆಯ ಇತರ ಅಧಿಕಾರಿಗಳೊಂದಿಗೆ ಭಾಗವಹಿಸಿದ್ದರು. ಮಂಗಳೂರಿನ ಡಿ. ವೈ. ಎಸ್ಪಿ. ಶ್ರೀ ಜ್ಯೋತಿ ಪ್ರಕಾಶ ಮಿರ್ಜಿಯವರೂ ಭಾಗವಹಿಸಿದ್ದರು.

ಬೀಡಿ ಕೈಗಾರಿಕೆಗೆ ಪ್ರಾವಿಡೆಂಟ್ ಫಂಡ್ ಕಾನೂನನ್ನು ತಾ|| 1-6-77 ರಿಂದ ಅನ್ವಯಗೊಳಿಸಿ ಕೇಂದ್ರ ಸರಕಾರವು ಹೊರಡಿಸಿದ ಆಜ್ಞೆಯ ಮೇಲೆ ಸುಪ್ರೀಂ ಕೋರ್ಟಿನಿಂದ ತಡೆಯಾಜ್ಞೆ ನೀಡಲಾಗಿತ್ತು. ಮಂಗಳೂರಿನ ಪ್ರಕಾಶ್ ಬೀಡಿಯವರು ತಮ್ಮ ಸಂಸ್ಥೆಯಲ್ಲಿ ತಾವಾಗಿಯೇ ಪ್ರಾವಿಡೆಂಟ್ ಫಂಡ್ ಸೌಲಭ್ಯವನ್ನು ಕೊಡಲು ಮುಂದಾದುದರಿಂದ ಆ ಸಂಸ್ಥೆಯಲ್ಲಿ ಆರಂಭದಿಂದಲೇ ಈ ಸೌಲಭ್ಯವು ಜ್ಯಾರಿಯಾಗಿತ್ತು. ಉಳಿದ ಸಂಸ್ಥೆಗಳ ಮಾಲಿಕರು ತಾ|| 1-8-1978 ರಿಂದೀಚೆಗೆ ತಮ್ಮ ಕಾರ್ಮಿಕರಿಂದ ಪ್ರಾವಿಡೆಂಟ್ ಫಂಡಿಗಾಗಿ ಹಣ ವಸೂಲು ಮಾಡುತ್ತಾ ಬಂದಿದ್ದರೂ ತಮ್ಮ ಕಾರ್ಮಿಕರ ಹೆಸರುಗಳಲ್ಲಿ ಖಾತೆಗಳನ್ನು ತೆರೆಯಲು ಬೇಕಾದ ಕ್ರಮ ಕೈಗೊಂಡಿರಲಿಲ್ಲ.

(8ನೇ ಪುಟ ನೋಡಿ)

ರಾಜ್ಯದಾದ್ಯಂತ ಯಶಸ್ವಿ ಪಿಕೆಟಿಂಗ್ ಕಾರ್ಯಕ್ರಮ

ರಾಜ್ಯ ಬೀಡಿ ಫೆಡರೇಷನ್ನಿನ ಕರೆಯ ಮೇರೆಗೆ, ಪ್ರಾವಿಡೆಂಟ್‌ಫಂಡ್ ಹಣವನ್ನು ಕಾರ್ಮಿಕರಿಗೆ ವಾಪಸ್ ಮಾಡಬೇಕೆಂದೂ, ಕಂಟ್ರಾಕ್ಟ್ ಪದ್ಧತಿ ರದ್ದಾಗಬೇಕೆಂದೂ, ಎಲೆ ಆ್ಯವರೇಜ್‌ನಲ್ಲಿ ನಡೆಯುವ ಮೋಸ ತಪ್ಪಿಸಬೇಕೆಂದೂ, ಸಾವಿರ ಬೀಡಿಗಳಿಗೆ ಕೂಲಿ 12 ರೂ. ಸಿಗಬೇಕೆಂದೂ, ಶೇ 20 ರೂ ಬೋನಸ್ ಕೊಡಬೇಕೆಂದೂ ಒತ್ತಾಯಿಸಿ 15-6-82 ರಂದು ರಾಜ್ಯದಾದ್ಯಂತ ಬೀಡಿ ಕಾರ್ಮಿಕರು ಪಿಕೆಟಿಂಗ್ ಕಾರ್ಯಕ್ರಮ ನಡೆಸಿದರು. ನಮಗೆ ತಲುಪಿರುವ ವರದಿಗಳು ಇಂತಿವೆ :

ತುಮಕೂರು :

15-6-82 ರಂದು ನಗರದಲ್ಲಿ ಮಹಿಳಾ ಕಾರ್ಮಿಕರೇ ಹೆಚ್ಚಾಗಿದ್ದ ಬೀಡಿ ಕಾರ್ಮಿಕರು ಕೆಂಬಾವುಟಗಳನ್ನು ಹಿಡಿದು, ಮಾಲೀಕರ ಪರವಾಗಿರುವ ಸರಕಾರದ ನೀತಿಯ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಜಿಲ್ಲಾಧಿಕಾರಿ ಕಚೇರಿ ಎದುರು ಪಿಕೆಟಿಂಗ್ ನಡೆಸಿದರು.

ತಕ್ಷಣ ಜಿಲ್ಲಾ ಹೆಡ್‌ಕ್ವಾರ್ಟರ್ಸ್ ಅಸಿಸ್ಟಂಟರವರು ಮಧ್ಯ ಪ್ರವೇಶಿಸಿ ಕಾರ್ಮಿಕರ ಪ್ರತಿನಿಧಿಗಳಾದ ಕಾಂ। ಕೆ. ಆರ್. ನಾಯಕ್, ಮಹಮ್ಮದ್ ದಸ್ತಗೀರ್, ಹಾಜಿರಾಂಬಿ ಮೊದಲಾದವರನ್ನು ಕರೆಸಿಕೊಂಡು ಕಾರ್ಮಿಕರ ಸಮಸ್ಯೆಗಳನ್ನು ಚರ್ಚಿಸಿ, ಬೀಡಿ ಕಾರ್ಮಿಕರ ಮನವಿಯನ್ನು ತಕ್ಷಣವೇ ಸರಕಾರಕ್ಕೆ ಕಳುಹಿಸುವುದಾಗಿಯೂ, ಪಿಕೆಟಿಂಗ್ ನಿಲ್ಲಿಸಬೇಕೆಂದೂ ಮನವಿ ಮಾಡಿದರು.

ನಂತರ ಕಾರ್ಮಿಕರ ಮೆರವಣಿಗೆಯು ಸಿ.ಐ.ಟಿ.ಯು. ಆಫೀಸಿಗೆ ತೆರಳಿತು. ಅಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ। ಕೆ.ಆರ್.ನಾಯಕ್ ಹಾಗೂ ಕಾಂ। ದಸ್ತಗೀರ್ ಅವರುಗಳು ಮಾತನಾಡಿ ಹೋರಾಟವನ್ನು ತೀವ್ರಗೊಳಿಸುವಂತೆ ಕರೆ ನೀಡಿದರು.

ಬಸ್ ಸ್ಟ್ಯಾಂಡ್ ಪಾದಚಾರಿ ಹಣ್ಣಿನ ವ್ಯಾಪಾರಿಗಳ ಸಂಘದ ಅಧ್ಯಕ್ಷರಾದ ಶ್ರೀ ಅಬ್ದುಲ್. ಘನಿ ಅವರು, ಬೀಡಿ ಕಾರ್ಮಿಕರ ಪಿಕೆಟಿಂಗ್ ಕಾರ್ಯಕ್ರಮಕ್ಕೆ ಧನಸಹಾಯ ಹಾಗೂ ಸಂಘದ ಸಂಪೂರ್ಣ ಬೆಂಬಲವನ್ನು ನೀಡಿದ್ದರು.

ಬಂಟ್ವಾಳ :

ಬೀಡಿ ಫೆಡರೇಷನ್ನಿನ ಕರೆಯಂತೆ 15-6-82 ರಂದು ಇಲ್ಲಿನ ತಾಲ್ಲೂಕು ಕಚೇರಿ ಎದುರು ಬೀಡಿ ಕಾರ್ಮಿಕರು ಪಿಕೆಟಿಂಗ್ ನಡೆಸಿದರು. ತಾಲ್ಲೂಕಿನ ವಿವಿಡೆಗಳಿಂದ ಸುಮಾರು 400ಕ್ಕೂ ಮಿಕ್ಕಿ (150ಕ್ಕೂ ಮಿಕ್ಕಿ ಮಹಿಳಾ ಕಾರ್ಮಿಕರು) ಕಾರ್ಮಿಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಬಂಧನಕ್ಕೊಳಗಾದರು. ಪ್ರಚಂಡ ಘೋಷಣೆಗಳೊಂದಿಗೆ ಆಗಮಿಸಿದ ಪ್ರದರ್ಶನಕಾರರು ಬಂಧನಕ್ಕೊಳಗಾದರು. ಅವರಲ್ಲಿ ಹೆಚ್ಚಿನವರು ಸ್ತ್ರೀ ಕಾರ್ಮಿಕರು ಇದ್ದುದು ವಿಶೇಷ ಸಂಗತಿ.

ಬಂಧನಕ್ಕೊಳಗಾದವರಲ್ಲಿ ಬೀಡಿ ಲೇಬರ್ ಯೂನಿಯನ್ ಪಾಣೆಮಂಗಳೂರು ಫಿರ್ಕಾದ ಅಧ್ಯಕ್ಷ ಕೃಷ್ಣಪ್ಪ ಸಾಲಿಯಾನ್, ಕಾರ್ಯದರ್ಶಿ ಬಿ. ನಾರಾಯಣ, ಕೋಶಾಧಿಕಾರಿ ಬಿ.ವಾಸು ಗಟ್ಟಿ, ಬಂಟ್ವಾಳ ಫಿರ್ಕಾ ಬೀಡಿ ಲೇಬರ್ ಯೂನಿಯನ್ನಿನ ಅಧ್ಯಕ್ಷ ವಿ. ಎಚ್. ಬಂಗೇರ, ಕಾರ್ಯದರ್ಶಿ ಸಂಜೀವ್ ಬಂಗೇರ ಮೊದಲಾದವರಿದ್ದರು.

ಈ ಪಿಕೆಟಿಂಗ್ ಕಾರ್ಯಕ್ರಮ ಮತ್ತೆ ಮುಂದುವರೆದು ಜೂನ್ 19ರ ವರೆಗೆ ನಡೆಯಿತು. ಈ ಅವಧಿಯಲ್ಲಿ ಪ್ರತಿದಿನ ಬೀಡಿ ಕಾರ್ಮಿಕರು ಬಂಧನಕ್ಕೊಳಗಾದರು.

ಕುಣಿಗಲ್ :

15-6-82 ರಂದು ತುಮಕೂರು ಜಿಲ್ಲೆಯ ಕುಣಿಗಲ್‌ನಲ್ಲಿ ನೂರಾರು ಬೀಡಿ ಕಾರ್ಮಿಕರು ತಾಲ್ಲೂಕು ಕಚೇರಿ ಎದುರು ಮುಷ್ಕರಪ್ರದರ್ಶನ ನಡೆಸಿದರು. ಮುಷ್ಕರಪ್ರದರ್ಶನದ ಮುನ್ನ ನಗರದಲ್ಲಿ ಮೆರವಣಿಗೆ ಹೊರಡಿಸಲಾಗಿತ್ತು. ಸ್ವಲ್ಪ ತಡವಾಗಿ ಕಚೇರಿಗೆ ಆಗಮಿಸಿದ ತಹಸೀಲ್ದಾರರನ್ನು ಬೀಡಿ ಕಾರ್ಮಿಕರು ಘೇರಾಯಿಸಿದರು. ತಕ್ಷಣ ಪೋಲೀಸರು ಆಗಮಿಸಿ ಕಾರ್ಮಿಕರನ್ನು ಬೆದರಿಸಿದರೂ ಕಾರ್ಮಿಕರು ಜಗ್ಗಲಿಲ್ಲ. ಅನುಚಿತವಾಗಿ ವರ್ತಿಸಿದ ಸ್ಥಳೀಯ ಸರ್ಕಲ್ ಇನ್ಸ್‌ಪೆಕ್ಟರನನ್ನು ಮಹಿಳಾ ಕಾರ್ಮಿಕರು ಘೇರಾವೋ ಮಾಡಿದರು.

ನಂತರ ತಹಶೀಲ್ದಾರರು ತಾಳ್ಮೆ ಕಳೆದುಕೊಳ್ಳುತ್ತಿದ್ದ ಕಾರ್ಮಿಕರನ್ನು ಒಳಗೆ ಕರೆದು ಅವರ ಬೇಡಿಕೆಗಳ ಕುರಿತು ಚರ್ಚಿಸಿದರು. ಜೂನ್ 24 ರಂದು ಮಾತುಕತೆಗೆ ವ್ಯವಸ್ಥೆ ಮಾಡುವುದಾಗಿಯೂ ಘೇರಾವೊ ಹಿಂತೆಗೆಯಬೇಕೆಂದೂ ಮನವಿ ಮಾಡಿದರು.

ತಾಲ್ಲೂಕು ಕಚೇರಿ ಹೊರಗಡೆ ನೆರೆದಿದ್ದ ಕಾರ್ಮಿಕರನ್ನುದ್ದೇಶಿಸಿ ಕಾಂ। ಬಡೇಸಾಬ್, ಸಲೀಮಾ ಬೇಗಂ, ಎಸ್. ಜಿ.ಯೂನುಸ್ ಖಾನ್ ಅವರುಗಳು ಮಾತನಾಡಿ, ಬೇಡಿಕೆಗಳ ಈಡೇರಿಕೆಗಾಗಿ ಜೈಲಿಗೂ ಹೋಗಲು ಸಿದ್ಧರಾಗಬೇಕೆಂದು ಕರೆ ನೀಡಿದರು. ಮಧ್ಯಾಹ್ನ ಮೂರು ಘಂಟೆಗೆ ಪಿಕೆಟಿಂಗ್ ಮುಕ್ತಾಯಗೊಳಿಸಲಾಯಿತು.

ಮೈಸೂರು :

ಬಂಟ್ವಾಳದಲ್ಲಿ ನಡೆದ ಬೀಡಿ ಕಾರ್ಮಿಕರ ರಾಜ್ಯ ಸಮ್ಮೇಳನದ ಕರೆಯಂತೆ 15-6-82 ರಂದು ಮೈಸೂರಿನಲ್ಲಿ ಬೀಡಿ ಕಾರ್ಮಿಕರು ಇಲ್ಲಿನ ಜ್ಯೋತಿ ಹೋಂ ಇಂಡಸ್ಟ್ರೀಸ್ ಎದುರು ತಮ್ಮ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಧರಣಿ ನಡೆಸಿ ಘೋಷಣೆ ಕೂಗಿದರು.

ಕಾಂ। ಎಂ. ಎಸ್. ಉಗ್ರಪ್ಪ ಮತ್ತು ಕಾಂ। ಇಸ್ಮಾಯಿಲ್ ನಾಯಕತ್ವ ವಹಿಸಿದ್ದರು.

ಕುಂದಾಪುರ :

15-6-82 ರಂದು ಬೀಡಿ ಕಾರ್ಮಿಕರ ಪಿಕೆಟಿಂಗ್ ಕಾರ್ಯಕ್ರಮದ ಅಂಗವಾಗಿ ಇಲ್ಲಿನ ತಾಲ್ಲೂಕು ಕಚೇರಿ ಎದುರು ಪಿಕೆಟಿಂಗ್ ನಡೆಸಿದರು.

ಬಂಧನಕ್ಕೆ ಒಳಗಾಗಲು ಸಿದ್ಧರಾಗಿ ಬಂದ ನೂರಾರು ಮಹಿಳಾ ಕಾರ್ಮಿಕರಿಗೆ, ಬೇಡಿಕೆಗಳ ಕುರಿತು ಶೀಘ್ರವಾಗಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರುವುದಾಗಿ ಕೂಡಾ ಹೇಳಿದರು.

ಅನಂತರ ನಡೆದ ಸಭೆಯನ್ನುದ್ದೇಶಿಸಿ ಕಾಂ। ಕೆ. ಶಂಕರ್, ಅಬ್ರಹಾಂ ಕರ್ಕಡ ಮತ್ತು ಕಾಂ। ಸಿ. ನಾರಾಯಣ ಅವರುಗಳು ಮಾತನಾಡಿ ಕಾರ್ಮಿಕರ ಬೇಡಿಕೆಗಳನ್ನು ಈವರೆಗೆ ಇತ್ಯರ್ಥ ಮಾಡದ ಸರಕಾರದ ನೀತಿಯನ್ನು ಖಂಡಿಸಿ, ತೀವ್ರ ಹೋರಾಟಕ್ಕೆ ಸಿದ್ಧರಾಗುವಂತೆ ಕರೆ ನೀಡಿದರು.

ಪುತ್ತೂರು :

ಬೀಡಿ ಫೆಡರೇಷನ್ನಿನ ಕರೆಯ ಮೇರೆಗೆ 15-6-82 ರಂದು ಪುತ್ತೂರು ತಾಲ್ಲೂಕಿನ ಬೀಡಿ ಕಾರ್ಮಿಕ ಸಂಘದ ವತಿಯಿಂದ ಕಾಂ। ಬಿ. ರಾಮಕೃಷ್ಣ ಅವರ ನೇತೃತ್ವದಲ್ಲಿ ತಹಶೀಲ್ದಾರರಿಗೆ ಮನವಿ ಅರ್ಪಿಸಿ, ಬೀಡಿ ಕಾರ್ಮಿಕರಿಗೆ ಕಂಟ್ರಾಕ್ಟ್‌ದಾರರಿಂದಾಗುವ ಅನ್ಯಾಯ, ಕಿರುಕುಳವನ್ನು ವಿವರಿಸಲಾಯಿತು.

●

ಲಾಠೀ ಚಾರ್ಜ್ ಖಂಡನೆ

15-6-82 ರಂದು ರಾಜ್ಯದಾದ್ಯಂತ ನಡೆದ ಬೀಡಿ ಕಾರ್ಮಿಕರ ಪಿಕೆಟಿಂಗ್ ಕಾರ್ಯಕ್ರಮದ ಅಂಗವಾಗಿ, ದ. ಕ. ಜಿಲ್ಲಾಧಿಕಾರಿ ಕಚೇರಿ ಎದುರು ಸಹಸ್ರಾರು ಬೀಡಿ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಪಿಕೆಟಿಂಗ್ ನಡೆಸುತ್ತಿದ್ದಾಗ, ಪೋಲೀಸರು ವಿನಾ ಕಾರಣ ಲಾಠೀ ಚಾರ್ಜ್ ಮಾಡಿರುವುದನ್ನು ಸಿ. ಪಿ. ಐ. (ಎಂ) ರಾಜ್ಯ ಸೆಕ್ರೆಟಾರಿಯೇಟ್ ತೀವ್ರವಾಗಿ ಖಂಡಿಸಿದೆ.

ನೂರಾರು ಸಂಖ್ಯೆಯಲ್ಲಿ ಮಹಿಳಾ ಕಾರ್ಮಿಕರೂ ಪಾಲ್ಗೊಂಡಿದ್ದ ಪ್ರದರ್ಶನಕಾರರ ಮೇಲೆ ಲಾಠೀ ಪ್ರಹಾರ ನಡೆಸಿದ್ದು ಅಮಾನವೀಯ ಎಂದಿರುವ ಸೆಕ್ರೆಟಾರಿಯೇಟ್, ಹೋರಾಟವನ್ನು ಪೋಲೀಸ್ ಬಲದಿಂದ ಹತ್ತಿಕ್ಕುವ ನೀತಿಯನ್ನು ಕಟುವಾಗಿ ಖಂಡಿಸಿದೆ.

ಈ ಕೂಡಲೇ ಬೀಡಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ತೀವ್ರ ಹೋರಾಟಕ್ಕಿಳಿಯಬೇಕಾದೀತೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಎಚ್ಚರಿಸಿದೆ.

ಮಂಗಳೂರು :

ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ

ದಲಿತರ ಹೆಸರಿನಲ್ಲಿ ರಚಿಸಿದ ಕಾನೂನುಗಳು, ಘೋಷಣೆಗಳು ಎಷ್ಟರ ಮಟ್ಟಿಗೆ ಕಾರ್ಯಗತವಾಗಿದೆಂಬುದನ್ನು ತಿಳಿದುಕೊಳ್ಳಲು ಮಂಗಳೂರು ತಾಲ್ಲೂಕಿನ ಸುರತ್ಕಲ್ ಫಿರ್ಕಾದ ಕೆಂಜಾರು ಗ್ರಾಮದ ಪೇಜಾವರದ ದಲಿತರ ಕಾಲೋನಿಯು ಉತ್ತಮ ಉದಾಹರಣೆಯಾಗಿದೆ.

ಇಲ್ಲಿನ ಸರಕಾರಿ ಜಮೀನು (ಸ.ನಂ. 176-1ಬಿ., 177-1ಬಿ)ನಲ್ಲಿ ಗುಡಿಸಲು ಕಟ್ಟಿಕೊಳ್ಳಲು ಅನುಮತಿ ಕೋರಿ ದಲಿತರು ಸಂಬಂಧಪಟ್ಟ ಅಧಿಕಾರಿಗಳನ್ನು ಕಳೆದ 5-6 ವರ್ಷಗಳಿಂದ ವಿನಂತಿಸಿಕೊಂಡಿದ್ದರೂ ಅನುಮತಿ ದೊರತಿಲ್ಲ. ಬೇಸತ್ತ ದಲಿತರು ದಲಿತ ಸಂಘರ್ಷ ಸಮಿತಿಯ ದ. ಕ. ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಸಂಘಟಿತರಾಗಿ ಹೋರಾಟದ ಮೂಲಕ ತಮ್ಮ ಹಕ್ಕು-ಸೌಲಭ್ಯಗಳನ್ನು ಪಡೆದುಕೊಳ್ಳಲು ಸನ್ನದ್ಧರಾಗಿದ್ದಾರೆ. ಮಾತ್ರವಲ್ಲ ತಮ್ಮನ್ನು ನಂಬಿಸಲು ಆಳುವ ವರ್ಗಗಳು ನಡೆಸುವ ಸಂಚುಗಳನ್ನು ಕಂಡುಕೊಂಡಿದ್ದಾರೆ.

30-1-82 ರಂದು ದ. ಸಂ. ಸ. ತಾಲ್ಲೂಕು ಸಮಿತಿಯ ನೇತೃತ್ವದಲ್ಲಿ 40 ಜನ ದಲಿತರು ಜಿಲ್ಲಾಧಿಕಾರಿಯವರಲ್ಲಿ ತೆರಳಿ ಭೂಮಿ ಕೊಡುವಂತೆ ವಿನಂತಿಸಿ ಮನವಿ ಅರ್ಪಿಸಿದ್ದರು. ಒಂದು ತಿಂಗಳೊಳಗೆ ಭೂಮಿ ವಿತರಿಸುವಂತೆ ಆದೇಶ ನೀಡುವೆನೆಂದು ಜಿಲ್ಲಾಧಿಕಾರಿ ಆಶ್ವಾಸನೆ ನೀಡಿದ್ದರು. ಈ ಭರವಸೆ ಕಾರ್ಯರೂಪಕ್ಕಿಳಿಯದಾದಾಗ ಪುನಃ 11-3-82 ಮತ್ತು 8-4-82 ರಂದು ಜಿಲ್ಲಾಧಿಕಾರಿಯವರನ್ನು ಕಂಡು ತಮ್ಮ ಅಳಲನ್ನು ತೋಡಿಕೊಂಡರು. ಮತ್ತೆ 15-5-82 ರಂದು ಅಧಿಕಾರಿಯನ್ನು ಭೇಟಿಯಾದಾಗ ಅವರು ತೀರಾ ಅನುಚಿತವಾಗಿ ವರ್ತಿಸಿದರು. ಅಲ್ಲದೇ ಜಮೀನನ್ನು ಸವರ್ಣೀಯರಿಗೆ ಹಂಚಲು ಮುತುವರ್ಜಿ ವಹಿಸಿದರು. ಈ ನಿರ್ಧಾರದ ಹಿಂದೆ ಸ್ಥಾಪಿತ ಹಿತಾಸಕ್ತಿಗಳ ಕೈವಾಡ ಸ್ಪಷ್ಟವಾಗಿ ಕಂಡು ಬಂದಿತು. ಈ ಜಿಲ್ಲಾಧಿಕಾರಿ ನಿವೇಶನ ಯಾರಿಗೆ ಕೊಡಲು ಮುತುವರ್ಜಿ ವಹಿಸಿದ್ದು ಗೊತ್ತೇ ?— ಮನರಂಜನಾ ಕ್ಲಬ್ ಒಂದಕ್ಕೆ.

ಇದನ್ನು ಪ್ರತಿಭಟಿಸಲು 19-6-82 ರಂದು ಜಿಲ್ಲಾಧಿಕಾರಿ ಕಚೇರಿ ಎದುರು ಸಾಂಕೇತಿಕ ಧರಣಿ ನಡೆಸಿದರು. ಈ ಕಾರ್ಯಕ್ರಮವನ್ನು ಕಾಂ। ಪಿ. ಕಮಲಾಕ್ಷ ಉದ್ಘಾಟಿಸಿದರು. ದಲಿತ ಸಂ. ಸ. ಜಿಲ್ಲಾ ಸಂಚಾಲಕ ಕಾಂ। ಬಿ. ರಾಮಕೃಷ್ಣರವರ ನೇತೃತ್ವದಲ್ಲಿ ವಿಶೇಷ ಜಿಲ್ಲಾಧಿಕಾರಿಯನ್ನು ಕಂಡು ಕೂಡಲೇ ನಿವೇಶನವನ್ನು ಭೂರಹಿತ ದಲಿತರಿಗೆ ಹಂಚಲು ಒತ್ತಾಯಿಸಲಾಯಿತು.

ಈ ಧರಣಿ ಸತ್ಯಾಗ್ರಹದಲ್ಲಿ 20 ಜನ ಮಹಿಳೆಯರೂ ಸೇರಿ 75 ಜನರು ಪಾಲ್ಗೊಂಡಿದ್ದರು. ಹೋರಾಟದ ಹಾಡು, ಘೋಷಣೆಗಳೊಂದಿಗೆ ಕಾರ್ಯಕ್ರಮವು ಸಾರ್ವಜನಿಕರ ಗಮನ ಸೆಳೆದಿತ್ತು. ಧರಣಿ ನಡೆಯುತ್ತಿದ್ದ ಸ್ಥಳಕ್ಕೆ ಪ್ರಾಂತ ರೈತ ಸಂಘದ ಅಧ್ಯಕ್ಷ ಕಾಂ। ಪಿ. ರಾಮಚಂದ್ರರಾವ್ ಮತ್ತು ಎಸ್. ಎಫ್. ಐ. ಮುಖಂಡ ಕಾಂ। ನಿರಂಜನ ಭೇಟಿ ನೀಡಿ ಬೆಂಬಲ ವ್ಯಕ್ತಪಡಿಸಿದರು.

ಬೇಡಿಕೆಗಳು :

1. ಪೇಜಾವರದ ದಲಿತರಿಗೆ ಕೂಡಲೇ ನಿವೇಶನಗಳನ್ನು ಒದಗಿಸಬೇಕು.
2. ಪೇಜಾವರದ ಕಾಲೋನಿಗೆ ಕುಡಿಯುವ ನೀರಿನ ಭಾವಿ, ರಸ್ತೆ, ವಿದ್ಯುತ್ ದೀಪಗಳನ್ನು ಒದಗಿಸಬೇಕು.
3. ದಲಿತೇತರರು ಆಕ್ರಮಿಸಿರುವ ದಲಿತರ ಭೂಮಿಯನ್ನು ತೆರವು ಮಾಡಿಸಬೇಕು.
4. ದಲಿತರಿಗೆ ಕಾದಿರಿಸಿದ ಜಮೀನನ್ನು ಇತರರಿಗೆ ಮಂಜೂರು ಮಾಡಿರುವುದನ್ನು ಹಿಂತೆಗೆಯಬೇಕು.

ಕರ್ನಾಟಕ ರಾಜ್ಯದಲ್ಲಿ

ಬೆಂಬಲ ಬೆಲೆ ಘೋಷಿಸಲಿ

—ಎನ್ಕೆ

ಮುಂಗಾರು ಬೆಳೆ ಬಿತ್ತನೆ ಆರಂಭವಾಗಿರುವುದರಿಂದ ವಿಳಂಬ ಮಾಡದೆ ಬೆಂಬಲ ಬೆಲೆ ಮತ್ತು ಸಂಗ್ರಹ ನೀತಿಯನ್ನು ಪ್ರಕಟಿಸಬೇಕೆಂದು ಭಾರತೀಯ ಸಾಮಾಜಿಕ ಆರ್ಥಿಕ ಅಧ್ಯಯನ ಕೇಂದ್ರದ ನಿರ್ದೇಶಕ ಎನ್. ಪಿ. ಪಾಟೀಲರು ಕರೆ ನೀಡಿದ್ದಾರೆ.

ಉತ್ಪಾದನೆ ಹೆಚ್ಚಿಸಲು ರೈತರಿಗೆ ಪ್ರೋತ್ಸಾಹ ಕೊಡುವ ಪ್ರಚಾರ ರೇಡಿಯೋ ಮತ್ತು ಪತ್ರಿಕೆಗಳ ಮೂಲಕ ನಡೆಯುತ್ತಿದ್ದರೂ ಬೆಂಬಲ ಬೆಲೆ ಕುರಿತು ಚಕಾರವೂ ಇಲ್ಲದ ಬಗೆಗೆ ಪಾಟೀಲರು ಆಕ್ಷೇಪಿಸಿದ್ದಾರೆ.

ತಾವು ಹಿರಿ ಬಂಡವಾಳ - ಭೂಮಾಲಿಕರ ಪರ ಇಂದಿರಾ ಕಾಂಗ್ರೆಸ್ ಪಕ್ಷದ ಆಡಳಿತೆಯಲ್ಲಿದ್ದೇವೆಂಬುದನ್ನು ಬಹುತೇಕ ಪಾಟೀಲರು ಮರೆತಿರಬೇಕು. ರಷ್ಯಾ-ಚೀನಾ ಮೊದಲಾದ ಸಮತಾವಾದಿ ರಾಷ್ಟ್ರಗಳಲ್ಲಿ ರೈತರು ಬಿತ್ತನೆ ಶುರು ಮಾಡುವ ಮುಂಚೆಯೇ ಬೆಂಬಲ ಬೆಲೆಯನ್ನು ಘೋಷಿಸುವ ಪ್ರವೃತ್ತಿಯಿದೆಂಬುದನ್ನು ಸರಕಾರಿ ಪ್ರಚಾರಗಳಿಂದಲೇ ಕಂಡುಕೊಂಡ ಈ ಮಹಾಶಯ ಭಾರತದಲ್ಲೂ ಅದೇ ನೀತಿಯನ್ನನುಸರಿಸಬಹುದೆಂಬ ಅಪೇಕ್ಷೆ ಹೊಂದಿರುವುದರಲ್ಲಿ ಆಶ್ಚರ್ಯವಿಲ್ಲ. ಭೂಮಾಲಿಕ, ಕಳ್ಳಸಂತೆ ಖೋರ, ದಾಸ್ತಾನುಗಾರರಿಂದ "ಚುನಾವಣೆ ಫಂಡ್" ಗಿಟ್ಟಿಸುವ ಕಾಂಗ್ರೆ ಪಕ್ಷ ರೈತರಿಗೆ ಪ್ರೋತ್ಸಾಹ ನೀಡುವ ನೀತಿ ಅನುಸರಿಸಬಹುದೆಂಬ ಶಂಕೆ ಕೂಡ ಇರುವುದು ಪಾಪ. ಹಾಗೆಯೇ ಟಾಟಾ, ಭಿರ್ಲಾರಂಥ ಗುತ್ತೇದಾರಿಗಳ ಪ್ರತಿನಿಧಿಗಳಾಗಿಯೇ ಆಡಳಿತ ನಡೆಸುತ್ತಿರುವವರು, ಗುತ್ತೇದಾರಿಗಳ ಕಾರ್ಖಾನೆಗಳಿಗೆ ಒದಗಿಸಲ್ಪಡುವ ಕಚ್ಚಾ ಮಾಲುಗಳಿಗೆ ಬೆಲೆ ನಿರ್ಧರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಹಾಗಾದರೆ ಪಾರ್ಟಿ ಖಜಾಂಚಿಗೆ ಅಪಾಯವಲ್ಲವೇ ? ಸಮಾಜವಾದದ ಘೋಷಣೆ ಸಲೀಸಾಗಿ ಅಗ್ಗದರದಲ್ಲಿ ಮಾರಾಟವಾಗುತ್ತಿರುವಾಗ ರೈತರಿಗೆ ಬೆಂಬಲಿತ ಬೆಲೆಯ ಪ್ರಕಟನೆಯ ಅವಶ್ಯಕತೆ ಏನಿದೆ ? ಪಾಟೀಲರಿಗೆ ಈ ಕಿವಿ ಮಾತು ಊದಿಲ್ಲವೇ, ಹೇಗೆ ?

ಬೆಂಬಲ ಬೆಲೆಯಷ್ಟೇ ಅಲ್ಲ, ಕೊಳ್ಳುವ ಸಂಘ ಸಂಸ್ಥೆಗಳು, ದಾಸ್ತಾನು ವ್ಯವಸ್ಥೆ, ಕೊಳ್ಳುವ ಸ್ಥಳ ಮತ್ತು ರೀತಿ, ಪ್ರಾಶಸ್ತ್ಯ ಇವುಗಳ ವಿವರಗಳೇನ್ನೂ ಈ ಸಾಹೇಬರು ಕೇಳಿದ್ದಾರಲ್ಲ. ಆಹಾರ ಮಂತ್ರಿ ಮಾಣಿಕರಾವ್ ಪಾಟೀಲರಿಗೆ ಎಂಥ ಛಾಲೆಂಜ್–ಆಹ್ವಾನ. ನಮ್ಮದು ಕಮ್ಯುನಿಸ್ಟ್ ರಾಷ್ಟ್ರವೆಂದು ಪಾಟೀಲರು ತಿಳಿದಿದ್ದಾರೆಯೇ ? ನಮ್ಮದು ಮನಬಂದಂತೆ ವರ್ತಿಸುವ ಆರ್ಥಿಕ ನೀತಿಯ ಸರಕಾರವಲ್ಲದೆ, ಮಾರ್ಕ್ಸ್‌ವಾದಕ್ಕನುಸರಿಸಿರುವ ಸಮಾಜವಾದಿ ಆರ್ಥಿಕ ನೀತಿಯುಳ್ಳವಲ್ಲ. ಭೂಮಿಯನ್ನು ಹರಗು (ಹದಮಾಡುವಾಗ) ವಾಗಲೇ ಅದರಲ್ಲಿ ಬೆಳೆಯುವ ಬೆಳೆಗಳಿಗೆ ಬೆಲೆ, ಖರೀದಿ, ಗೋದಾಮು ನೀತಿಗಳೆಲ್ಲ ಮುಂಚಿತವಾಗಿ ಘೋಷಿಸಲು ನಾವು ಹುಚ್ಚರೇ ? ನಮ್ಮ ಹಿತೈಷಿಗಳು ಸಿಟ್ಟಾಗುವುದಿಲ್ಲವೇ ?

ಚೆಂದ್ರೇಗೌಡರ ಕಣ್ಣೀರು

ಚೆಂದ್ರೇಗೌಡರ ಕಣ್ಣೀರು ಕೋಡಿಯಾಗಿ ಹರಿಯಿತಂತೆ. ದೇವರಾಜ ಅರಸರ ಪ್ರಾಣ ಪಕ್ಷಿ ಹಾರಿ ಹೋಗಿ ಪಾದಗಳಲ್ಲಿ ರಕ್ತ ಸಂಚಾರ ನಿಂತನಂತರ ಚೆಂದ್ರೇಗೌಡರ ಕಣ್ಣೀರಿನ ಸಂಚಾರ ಅರಸರ ಪಾದಗಳನ್ನು ಪವಿತ್ರಗೊಳಿಸಿತಂತೆ. ಅರಸು ಮೃತ ದೇಹದ ಮಗ್ಗಲಲ್ಲೆ ಕುಳಿತಿದ್ದ ಸಾಕುಮಗಳು ನಿರ್ಮಲ ಗೊಣಗಿದಳಂತೆ — ಅರಸರಿಂದ ಎಲ್ಲ ಗಳಿಸಿ, ಅವರಿಗೆ ದ್ರೋಹ ಬಗೆದ ಈ ಮಗ ಈಗ "ನನ್ನಪ್ಪ, ನಮ್ಮ ಗುರು, ತಂದೆ" ಎಂದೆಲ್ಲ ಬಡಬಡಿಸುತ್ತಿದ್ದಾನೆ. ಕಾಲ ಮೇಲೆಬಿದ್ದು ರೋದಿಸುತ್ತಿದ್ದಾನೆ. ಈ ನೀಚ" ಅಧಿಕಾರ ಪಡೆಯುವುದೊಂದೇ ಗುರಿಯಾಗಿದ್ದಾಗ ನಾಚಿಕೆಯ ಪ್ರಶ್ನೆ ಎಲ್ಲಿ. ತಾನು ಮುಖ್ಯ ಮಂತ್ರಿ ಪದವಿ ಪಡೆಯಲು ದಾರಿ ಮಾಡಿಕೊಟ್ಟವರು ದೇವರಾಜ ಅರಸರೇ ಎಂಬುದನ್ನೂ ಗುಂಡೂರಾಯರು ಈಗ ಒಪ್ಪಿಕೊಳ್ಳುತ್ತಿದ್ದಾರಲ್ಲ.

ಅರಸರು ಅಧಿಕಾರದಲ್ಲಿದ್ದಾಗ, ಅವರಿಂದ ಎಲ್ಲವನ್ನೂ ಪಡೆದು, ಕರ್ನಾಟಕದಲ್ಲಿ ಕನಿಷ್ಠ ಕಾರ್ಯಕ್ರಮದ ನೆಲೆಯಲ್ಲಿ ವಿರೋಧಿ ಪಕ್ಷಗಳ ಐಕ್ಯತೆ ಸಾಧಿಸಲು; 4 ವಿರೋಧಿ ಪಕ್ಷಗಳ ಪ್ರಜಾಸತ್ತಾತ್ಮಕ ಜನತಂತ್ರರಂಗ ಸ್ಥಾಪಿಸಿ, ಅದರ ಅಧ್ಯಕ್ಷರಾಗಿ, ನರಗುಂದದಿಂದ ಚರಿತ್ರಾರ್ಹ ರೈತರ ಮೋರ್ಚವನ್ನು ಸಂಘಟಿಸುವುದರಲ್ಲಿ ಮಹತ್ವದ ಪಾತ್ರಧಾರಿ ಚೆಂದ್ರೇಗೌಡರಿಗೆ ಅಮ್ಮಾವ್ರ ಮೇಲಿನ ಪ್ರೇಮ ಕಡಿಮೆಯಾಗದೆ, ಅರಸರನ್ನು ಬಿಟ್ಟು ಕಾಂಗ್ರೆ ಸೇರಿದ್ದರು. ಗುಂಡೂರಾಯರ ಗರಡಿಯಲ್ಲಿ ಗೌಡರಿಗೆ ಪ್ರವೇಶವೇ ? ರಾಠೋಡ—ಗುಂಡೂರಾವ್ ಮಹಾಯುದ್ಧವೇ ತಲೆನೋವಾಗಿರುವಾಗ, ಗೌಡ್ರ ಪ್ರವೇಶ ಪ್ರಶ್ನೆ ಚಿಂತಿಸಲೂ ಅಮ್ಮಾವ್ರಗೆ ಪುರುಸೊತ್ತಿಲ್ಲ. ಗೌಡ್ರ ಅರ್ಜಿಗೆ ಅಜ್ಜನ ಗತಿಯಾಯಿತು. ಚವಾಣನಂತ ಹಳೇ ಹುಲಿಗಳು ವರ್ಷಕ್ಕೂ ಮೇಲ್ಪಟ್ಟು ಇಂದಿರಾ ದ್ವಾರದ ಈಕ್ಷಕನಾಗಿರಬೇಕಾಗಿ ಬಂದಿರುವಾಗ, ಗೌಡರಿಗೆ 10 ತಿಂಗಳಲ್ಲೆ ಬೇಸರ ಬಂತಂತೆ. ಅದೂ ದೇವರಾಜ ಅರಸರು ಮೃತಪಟ್ಟ ಕೂಡಲೇ, ಯಾಕೆ ಗೊತ್ತೇ? ಕರ್ನಾಟಕ ಕ್ರಾಂತಿ ರಂಗದ ಪಟ್ಟ ಖಾಲಿಯಾಗಿದೆ. ಬಂಗಾರಪ್ಪ, ಡಾ|| ರಾಜಕುಮಾರ್ ಮೊದಲಾದವರೂ ಈ ಪಟ್ಟದ ಮೇಲೆ ಕಣ್ಣಿಟ್ಟಿದ್ದಾರೆಂಬ ಸುದ್ದಿ ಹಬ್ಬಿರುವಾಗ, ಸಾಧ್ಯವಾದರೆ ಈ ಪಟ್ಟ ಗಿಟ್ಟಿಸಲು ಕೊಡ ಕಣ್ಣೀರು ಸುರಿಸಿದರೆ ತಪ್ಪೇನು ? ಕೇಂದ್ರ ಸರಕಾರದ ನೌಕರಿಗೆ ರಾಜೀನಾಮೆ ಕೊಟ್ಟು, ಹೋದ ತಿಂಗಳು ಲೋಕದಳ ಸೇರಿ ಬೆಂಗಳೂರಿಗೆ ಬಂದಿಳಿದ ಅರಸರ ಸಾಕು ಮಗಳು ನಿರ್ಮಲಾ ಪ್ರಸಾದಳ ಪಾತ್ರ ಕರ್ನಾಟಕ ರಾಜಕೀಯದಲ್ಲಿ ಹೆಚ್ಚು ಬೆಳಕು ಕಾಣಬಹುದಾಗಿದೆ. ಅರಸರ ಅಕಸ್ಮಾತ್ ಅಗಲುವಿಕೆ ಜಾರ್ಜ್ ಫರ್ನಾಂಡೀಸ್‌ರಂಥವರಿಗೆ ಕರ್ನಾಟಕ ರಾಜಕಾರಣದಲ್ಲಿ ಹೆಚ್ಚು ಮಹತ್ವದ ಪಾತ್ರವಹಿಸಲೂ ಅನುಕೂಲವಾಗಬಹುದು. ಕೆಲವೇ ದಿವಸಗಳಲ್ಲಿ ಇದಕ್ಕೆ ಮೂರ್ತ ಸ್ವರೂಪಬರಬಹುದು. ಆಗ ಚೆಂದ್ರೇಗೌಡ, ಬಂಗಾರಪ್ಪ ಡಾ|| ರಾಜಕುಮಾರ್, ಜಾರ್ಜ್ ಫರ್ನಾಂಡೀಸ್ ಹಾಗೂ ನಿರ್ಮಲಾ ಪ್ರಸಾದಳ ಪಾತ್ರ, ಸ್ಥಾನಗಳ ಕುರಿತೂ ಕರ್ನಾಟಕ ಕ್ರಾಂತಿ ರಂಗದ ಭವಿಷ್ಯದ ಕುರಿತೂ ಹೆಚ್ಚು ಬೆಳಕು ಬೀಳಬಹುದು. ಸರ್ವಾಧಿಕಾರಿ ವಿರೋಧ ಶಕ್ತಿಗಳನ್ನೆಲ್ಲ ಒಗ್ಗೂಡಿಸುವುದರಲ್ಲಿ, ಎರಡೂ ಕಮ್ಯುನಿಸ್ಟ್ ಪಾರ್ಟಿಗಳ ಪಾತ್ರ ಬಹಳ ಮಹತ್ವದ್ದು. ಇಂದಿರಾ ಗಾಂಧಿಯ ಏಕವ್ಯಕ್ತಿ ಸರ್ವಾಧಿಕಾರದ ವಿರುದ್ಧ ಸತತವಾಗಿ ಹೋರಾಡುತ್ತಿದ್ದ, ಹಾಗೆಯೇ ಕನಿಷ್ಠ ಕಾರ್ಯಕ್ರಮದ ಆಧಾರದಲ್ಲಿ ವಿರೋಧಿ ಪಕ್ಷಗಳನ್ನೆಲ್ಲ – ಎರಡೂ ಕಮ್ಯುನಿಸ್ಟ್ ಪಾರ್ಟಿಗಳನ್ನು ಸೇರಿ – ಒಗ್ಗೂಡಿಸಲು ಪ್ರಯತ್ನ ನಡೆಸಿದ್ದ ದೇವರಾಜ ಅರಸರ ಅಕಾಲಿಕ ಮರಣದಿಂದುಂಟಾದ ಪರಿಸ್ಥಿತಿಯನ್ನು ಎರಡೂ ಕಮ್ಯುನಿಸ್ಟ್ ಪಾರ್ಟಿಗಳು ಚೆನ್ನಾಗಿ ಅಭ್ಯಾಸ ಮಾಡಿ, ಕರ್ನಾಟಕದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೆಲ್ಲ ಒಂದಾಗಿ ಜನರ ಚಳುವಳಿಯ ಮುಖಂಡತ್ವ ವಹಿಸುವ ದಿಸೆಯಲ್ಲಿ ಕಾರ್ಯಪ್ರವೃತ್ತರಾಗುವುದು ಅತ್ಯಗತ್ಯ. ಇಂದಿನ ಸಂಧಿಕಾಲದ ಈ ಕರ್ತವ್ಯ ಪೂರೈಸಲು ಮುಂದಾಗೋಣ.

ವಿಧಾನ ಸಭೆ–ಪರಿಷತ್ತಿನಲ್ಲಿ ಕೇಳಿದ್ದು

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕಾಪಿ ಇತ್ಯಾದಿ ಅಕ್ರಮ ಅವ್ಯವಹಾರಗಳು ವ್ಯವಸ್ಥಿತ ರೀತಿಯಲ್ಲಿ ಜ್ಯಾರಿಯಲ್ಲಿವೆಯೆಂದು ವಿಧಾನ ಪರಿಷತ್ತಿನಲ್ಲಿ ಡಾ|| ನರಸಿಂಹಯ್ಯ ಮೊದಲಾದವರ ಆರೋಪ. ಇದರ ಬಗ್ಗೆ ತನಿಖೆಯಾಗಲೆಂಬ ಬೇಡಿಕೆ ಬೇರೆ. ಕಾಪಿ ಮಾಡುವುದರಲ್ಲಿ ಎಲ್ಲ ವರ್ಗದವರೂ ಅಂದರೆ ಮಂತ್ರಿ, ಅಧಿಕಾರಿ, ಎಂ.ಎಲ್.ಎ, ವಕೀಲರು, ಮಾಸ್ತರು–ಸೇರಿದ್ದಾರೆಂದಾಗ ವಿಚಾರಣೆ ಮಾಡುವವರಾರು ? ವಿಚಾರಣೆಯಾದಲ್ಲಿ ಆ ವರದಿ ಪ್ರಕಟಿಸಲ್ಪಡುವುದಿಲ್ಲ. ಯಾಕೆ ಗೊತ್ತೇ? ಮುಖ್ಯ ಮಂತ್ರಿಯವರನ್ನೊಳಗೊಂಡು ಎಲ್ಲಾ ವರ್ಗದ ಹಿರಿಯರ ಹೆಸರೆಲ್ಲಾ ಆ ವರದಿಯಲ್ಲಿದ್ದೇ ಇರುತ್ತದೆ. ಹಾಗಾದರೆ !

ಕೃಷ್ಣಾ ಮೇಲ್ದಂಡೆ ಯೋಜನೆಯ ವಿವಿಧ ಭಾಗಗಳಿಗೆ ತಲುಪಬೇಕಾದ 2,699 ಟನ್ ಸಿಮೆಂಟ್ ಅಡ್ಡದಾರಿ ಹಿಡಿದಿದೆ. ಇದರ ಅಂದಾಜು ಮೌಲ್ಯ 16 26 ಲಕ್ಷ ರೂ. ಈ ಪ್ರಕರಣದಲ್ಲಿ 10 ಅಧಿಕಾರಿಗಳನ್ನು ಸಸ್ಪೆಂಡ್ ಮಾಡಲಾಗಿದೆಂದು ಮಂತ್ರಿ ಚಿಮ್ಮನಕಟ್ಟಿಯವರ ಹೇಳಿಕೆ.

1981 ಜನವರಿ–ಫೆಬ್ರವರಿಯಲ್ಲಿ ಈ ಪ್ರಕರಣಗಳು ಬೆಳಕಿಗೆ ಬಂದಿವೆಯಂತೆ. ಅನಂತರ ಕೂಡ ಪ್ರತಿದಿನ ಟನ್‌ಗಟ್ಲೆ ಸಿಮೆಂಟು ಅಡ್ಡದಾರಿಯಲ್ಲೇ ಸಾಗಿದೆಂಬ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಲೇ ಇದೆ. ಚುನಾವಣೆಯ ನಿಧಿಗಾಗಿ ಅಧಿಕಾರಿಗಳನ್ನು ಕಂಟ್ರಾಕ್ಟರರನ್ನು ಅವಲಂಬಿಸುವ ಕಾಂಗ್ರೆ ಮಂತ್ರಿಗಳು, ಸಿಮೆಂಟ್, ಕಬ್ಬಿಣ, ಹಣ ಸೋರುವಿಕೆಯನ್ನು ತಡೆಗಟ್ಟುವುದರಲ್ಲಿ ಯಶಸ್ವಿಯಾಗುವುದಿಲ್ಲ.

ರಾಜ್ಯದ ಬೊಕ್ಕಸದಿಂದ ಬಹುದೊಡ್ಡ ಭಾಗವನ್ನು ಬೇಡಿ ಪಡೆವ ಇಲಾಖೆ ಶಿಕ್ಷಣ. ಇದರ ಬೇಡಿಕೆ ವಿಧಾನ ಸಭೆಯ ಮುಂದೆ ಬಂದಾಗ ಶಿಕ್ಷಣ ಸಚಿವರ ಬೆವರಿಳಿಸುವಷ್ಟು ಕಾವು ಏರುತ್ತಿದ್ದ ದಿನಗಳಿದ್ದವು. ಈಸಲ 250 ಕೋಟಿ ರೂ. ಬೇಡಿಕೆಯನ್ನು ಮಂಡಿಸಿದಾಗ ನಡೆದ ಚರ್ಚೆಯಲ್ಲಿ ಯಾವ ಲೋಪದ ಅಲೆಯೂ ಅಲುಗಾಡಲಿಲ್ಲ.

ಪ್ರಾಥಮಿಕದಿಂದ ಹಿಡಿದು ವಿಶ್ವವಿದ್ಯಾಲಯದವರೆಗಿನ ದುಬಾರಿಯಾದ, ಅವ್ಯವಹಾರಿಕವಾದ, ಭ್ರಷ್ಟಾಚಾರದಿಂದ ತುಂಬಿತುಳುಕುವ, ಜಾತೀಯತೆಯ ನೆಲೆಬೀಡಾಗಿರುವ ಶಿಕ್ಷಣ, ಗಾಳಿ, ಬೆಳಕುಗಳಿಲ್ಲದ ಕೋಣೆಗಳು, ಅದರಲ್ಲಿ ಮಕ್ಕಳ ಮೇಲೆ ಮಕ್ಕಳು ಕೂಡುವ ಸ್ಥಿತಿ, ಇಡೀ ಕಟ್ಟಡವೇ ಕುಸಿದು ಬೀಳುವ ಗಂಭೀರ ಸ್ಥಿತಿ, ಪಠ್ಯ ಪುಸ್ತಕಗಳಲ್ಲಿಯ ಲೋಪ ದೋಷಗಳು, ಅವು ಲಭ್ಯವಾಗದಿರುವುದು, ಪರೀಕ್ಷೆಯಲ್ಲಿ ಕಾಪಿ ಮಾಡುವುದು, ಹಿರಿಯರಿಂದ ಇದಕ್ಕೆ ಸಿಗುವ ಸೌಲಭ್ಯ, ಪರೀಕ್ಷಾ ಫಲಿತಾಂಶಗಳು–ಹೀಗೆ ಹಲವಾರು ಸಮಸ್ಯೆಗಳಿಂದಾಗಿ ಶಿಕ್ಷಣ ರಂಗ ಕ್ಷಯರೋಗಕ್ಕೀಡಾಗಿದ್ದರೂ, ಯಾವೊಬ್ಬ ಸದಸ್ಯನೂ, ಈ ಖಾತೆಯ ಕುಂದು ಕೊರತೆಗಳ ಕುರಿತು ಚಕಾರ ಎಬ್ಬಿಸದಿರುವುದರಲ್ಲಿ ಆಶ್ಚರ್ಯವಿಲ್ಲವೇ ಎಂದು ನೀವು ಕೇಳಬಹುದು. ಕಲಿಯದ ನನ್ನ ಮಕ್ಕಳನ್ನು ಪ್ರಭಾವದಿಂದ ಪಾಸು ಮಾಡಿಸುವ ಸಾಮರ್ಥ್ಯ ನಾನ್ನ ಹೊಂದಿರುವಾಗ ಶಿಕ್ಷಣಖಾತೆಯ ಉಸಾಬರಿಗಳನ್ನೆಬ್ಬಿಸಿ ಎಲ್ಲರಿಗೂ ತಲೆನೋವುಂಟುಮಾಡುವುದರ ಅಗತ್ಯವೇನಿದೆಂದು ಆರಿಸಿ ಹೋದ ಸದಸ್ಯರ ವಾದ. 1983ರಲ್ಲಷ್ಟೆ ಇದಕ್ಕೆ ಆಹ್ವಾನವಲ್ಲವೇ, ಈಗ್ಯಾಕೆ ಚಿಂತೆ. ಇದು ಎಂ.ಎಲ್.ಎ.ಗಳ ವಾದ. ಸರಿಯಲ್ಲವೇ ?

ಸ್ವೈಛೆಂಡರಿ ನೌಕರರಲ್ಲೆಲ್ಲ ಅಥ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಖಾಲಿ ಇರುವ ಹುದ್ದೆಗಳಿಗೆ ನೇಮಿಸಿಕೊಳ್ಳಲು ಸರ್ಕಾರ ನಿರ್ಧರಿಸಿದೆಂದು ಮುಖ್ಯ ಮಂತ್ರಿ ಗುಂಡೂರಾಯರು ವಿಧಾನ ಸಭೆಯಲ್ಲಿ ಸಾರಿದರು. ಹನ್ನೆರಡು ತಿಂಗಳ ಹಿಂದೆ ಮಂತ್ರಿ ಮಂಡಲದ ನಿರ್ಣಯ ಸಾರಲಾಗಿತ್ತು. ಮೈಸೂರಿನಲ್ಲಿ ಮುಖ್ಯ ಮಂತ್ರಿಗಳ ತುಲಾಭಾರ ಮಾಡಿದರು, ಬೆಳ್ಳಿಯ ಖಡ್ಗ ಅರ್ಪಿಸಿದರು ಸ್ವೈಛೆಂಡರಿಗಳು. ಈಗ ಸರಕಾರದ ನಿರ್ಣಯ ಪ್ರಕಟಿಸಿದರು ಮುಖ್ಯ ಮಂತ್ರಿಯವರು. ಇದರ ಜ್ಯಾರಿಗೆ ಎಷ್ಟು ತಿಂಗಳು ಬೇಕು ? ಅದನ್ನು ನಿರ್ಧರಿಸುವವರು ವಾಟಾಳ್ ನಾಗರಾಜರೇ ಇರಬಹುದು. ಯಾಕೆಂದರೆ ಸ್ವೈಛೆಂಡರಿಗಳ ಆಜ್ಞೆ ಹೊರಬೀಳುವ ಮುಂಚೆ ಮತ್ತೊಮ್ಮೆ ಗುಂಡೂರಾಯರ ಬಂಗಾರದ ತುಲಾಭಾರ ನಡೆಯಬೇಕಲ್ಲ. ಅದರ ಪೌರೋಹಿತ್ಯ ವಾಟಾಳರದ್ದೆ. ಐದು ಸಾವಿರ ಕೊಡಲೂ ಸಿದ್ಧ, ನೌಕರಿ ಖಾಯಂ ಆಗಲಿ— ಸ್ವೈಛೆಂಡರಿಗಳ ವಿಚಾರ ಇದು. ಇದೆಲ್ಲ ಅಪಾಯಕಾರಿ ವಿಚಾರ. ಹೋರಾಡಿ ನ್ಯಾಯ ಪಡೆಯಬೇಕಲ್ಲದೆ, ಭ್ರಷ್ಟಾಚಾರಕ್ಕಿಳಿದಲ್ಲವೆಂಬುದನ್ನು ಸ್ವೈಛೆಂಡರಿಗಳು ತಿಳಿಯಲಿ.

●

ಸಾಣಿಕೊಪ್ಪ :

ಹೋರಾಡಲು ಮುಂದೆ ಬನ್ನಿ : ಹಳಕಟ್ಟಿ

ಈ ಬಂಡವಾಳಶಾಹೀ-ಭೂಮಾಲೀಕ ವ್ಯವಸ್ಥೆಯಿಂದಾಗಿ ರೈತರಿಗೆ, ಕೂಲಿಕಾರರಿಗೆ ಅನ್ಯಾಯವಾಗುತ್ತಿದೆ; ಜನಸಾಮಾನ್ಯರ ಮೇಲೆ ನಡೆಯುವ ಮೋಸ, ದಬ್ಬಾಳಿಕೆಯನ್ನು ಸಂಘಟಿತರಾಗಿ ಎದುರಿಸಲು ಮುಂದೆ ಬನ್ನಿ ಎಂದು ಕಾಂ| ಹಳಕಟ್ಟಿ ಕರೆ ನೀಡಿದರು. 6–6-82 ರಂದು ಬೈಲಹೊಂಗಲ ತಾಲ್ಲೂಕಿನ ಸಾಣಿಕೊಪ್ಪ ಗ್ರಾಮದಲ್ಲಿ ರೈತರನ್ನುದ್ದೇಶಿಸಿ ಕಾಂ| ಹಳಕಟ್ಟಿ ಮಾತನಾಡುತ್ತಿದ್ದರು.

ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿಯಾಗಿರುವ ಕಾಂ| ವಿ.ಎಸ್. ಹಳಕಟ್ಟಿಯವರನ್ನು ಸಭೆಗೆ ಮುನ್ನ ಗ್ರಾಮಸ್ಥರು ಮೆರವಣಿಗೆಯಲ್ಲಿ ಕರೆದೊಯ್ದರು. ಸಭೆಯ ಅಧ್ಯಕ್ಷತೆಯನ್ನು ಕಾಡಪ್ಪಣ್ಣ ಗುರುವಣ್ಣನವರು ವಹಿಸಿದರು. ನೆರೆದಿದ್ದ ರೈತ ಬಾಂಧವರನ್ನುದ್ದೇಶಿಸಿ ವಿದ್ಯಾರ್ಥಿ ಸಂಘಟನೆಯಲ್ಲಿ ಕೆಲಸ ಮಾಡುತ್ತಿರುವ ಕಾಂ| ಅಶೋಕ ಶೆಟ್ಟಿಅವರು ಮಾತನಾಡಿ ಐಕ್ಯ ಹೋರಾಟದ ಮಹತ್ವವನ್ನು ವಿವರಿಸಿದರು.

ಪ್ರಾಂತ ರೈತ ಸಂಘದ ಸಾಣಿಕೊಪ್ಪ ಘಟಕದ ಪದಾಧಿಕಾರಿಗಳಾದ ವೀರಭದ್ರಯ್ಯ, ಶಿವಯ್ಯ, ಬಸಲಿಂಗಯ್ಯ ಇವರು ಸ್ಥಳೀಯ ಸಮಸ್ಯೆಗಳ ಬಗ್ಗೆ ಮಾತನಾಡಿ ಹೋರಾಟದ ಪಣ ತೊಟ್ಟರು. ಆರಂಭದಲ್ಲಿ ಕಾರ್ಯದರ್ಶಿ ಬಸಲಿಂಗಪ್ಪಡೊಳ್ಳಿನ ಅವರು ಸ್ವಾಗತಿಸಿದರು.

ನಾಝಿ ಸೆರೆಮನೆಯಲ್ಲಿ ಕಾಂ! ಥೇಲಮನ್—

[18 ಆಗಸ್ಟ್ 1944 ರಂದು ಜರ್ಮನಿಯ ಮಹಾನ್ ಕಮ್ಯುನಿಸ್ಟ್ ಮುಖಂಡ, ಜರ್ಮನ್ ಕಮ್ಯುನಿಸ್ಟ್ ಪಕ್ಷದ ಜನರಲ್ ಸೆಕ್ರೆಟರಿ ಕಾ. ಅರ್ನ್ಸ್ಟ್ ಥೇಲಮನ್‌ರನ್ನು ಫ್ಯಾಶಿಸ್ಟ್ ನಾಝಿ ಆಡಳಿತಗಾರರು ಅತ್ಯಂತ ಅಮಾನುಷ ರೀತಿಯಲ್ಲಿ ಸೆರೆಮನೆಯಲ್ಲಿ ಕೊಲೆ ಮಾಡಿದರು. ಹಾಗೂ ಅವರ ಶವವನ್ನು ಬುಕನ್‌ವಾಲ್ಡ ಎಂಬ ಕುಪ್ರಸಿದ್ಧ ಫ್ಯಾಶಿಸ್ಟ್ ಕ್ಯಾಂಪಿನಲ್ಲಿ ಒಯ್ದು ಗುಪ್ತವಾಗಿ ದಹಿಸಿ ಹಾಕಿದರು.

ಫೆಬ್ರುವರಿ 1933 ರಲ್ಲಿ ಹಿಟ್ಲರ್ ಅಧಿಕಾರಗ್ರಹಣ ಮಾಡಿದನು. ಹಾಗೂ ಒಂದು ತಿಂಗಳು ಕಳೆಯುವ ಮೊದಲೇ ಕಾಂ! ಥೇಲಮನ್‌ರನ್ನು ಬಂಧಿಸಲು ಆಜ್ಞೆ ನೀಡಿದನು. ಮರಣದ ತನಕ ಅಂದರೆ ಹನ್ನೊಂದು ವರ್ಷಗಳ ಅವರ ದೀರ್ಘಕೈದುವಾಸವೆಂದರೆ ರಾಕ್ಷಸೀ ಫ್ಯಾಶಿಸ್ಟ್ ದಬ್ಬಾಳಿಕೆ ಹಾಗೂ ಅತ್ಯಾಚಾರಗಳ ವಿರುದ್ಧ ಕ್ರಾಂತಿಕಾರಕ ಕಮ್ಯುನಿಸ್ಟ್ ಹೋರಾಟದ ಮಹಾನ್ ವಿಜಯವೇ ಆಗಿತ್ತು. ಬಂಧಿಸಿದ ಬಳಿಕ ಕಾಂ! ಥೇಲಮನ್‌ರನ್ನು ಏಕಾಂತ ವಾಸದಲ್ಲಿಡಲಾಯಿತು. ಯಾರಿಗೂ, ಅವನ ಮಡದಿ ಹಾಗೂ ಮಗಳಿಗೂ ಕೂಡ, ಬಹುಕಾಲದ ವರೆಗೆ ಅವನನ್ನು ಕಾಣಲು ಬಿಟ್ಟಿರಲಿಲ್ಲ. ಕೊನೆಗೊಮ್ಮೆ ಅವನ ಪತ್ನಿಯು ಯಾವಾಗ ಸೆರೆಮನೆಯಲ್ಲಿ ಅವನನ್ನು ಭೆಟ್ಟಿಯಾಗಲು ಹೋದಳೋ ಆ ಸಮಯದಲ್ಲಿ ದೃಶ್ಯವನ್ನು ಅವಳು ನಂತರ ತನ್ನ ಮಗಳಿಗೆ ಹೀಗೆ ವರ್ಣಿಸಿದಳು : "ಬಾಗಿಲು ತೆರೆಯಲಾಯಿತು ಹಾಗೂ ಎಸ್. ಎಸ್. ಗೂಂಡಾಗಳು (ಎಸ್. ಎಸ್. ಇದು ಹಿಟ್ಲರನ ಆಳ್ವಿಕೆಯಲ್ಲಿಯ ವಿಶಿಷ್ಟ ಗೂಂಡಾಪಡೆಯ ಹೆಸರು) ನಿನ್ನ ತಂದೆಯನ್ನು ಒಳಗೆ ತಂದರು; ಅವನಿಗೆ ಸರಿಯಾಗಿ ನಡೆಯಲೂ ಕೂಡ ಆಗುತ್ತಿರಲಿಲ್ಲ. ಅವನ ಬಾಯಿಯಲ್ಲಿ ಒಂದು ಹಲ್ಲು ಕೂಡ ಉಳಿದಿರಲಿಲ್ಲ. ಅವನ ಮುಖ ಬಾತುಕೊಂಡಿತ್ತು ಹಾಗೂ ಮೈಯೆಲ್ಲ ನೀಲಿ-ಕಪ್ಪಾಗಿ ಹೋಗಿತ್ತು. ಒಂದಿಷ್ಟು ಕುಳಿತುಕೊಳ್ಳಲೂ ಬಾರದ ಸ್ಥಿತಿಯಲ್ಲಿ ಅವನಿದ್ದನು. ನಾನು ಗಾಬರಿಯಾಗಿ ತಕ್ಷಣ ಕಿರುಚಿದೆ, "ನಿನ್ನನ್ನು ಯಾವ ಗತಿಗೆ ತಂಡಿಟ್ಟದ್ದಾರೆ, ನನ್ನ ಪ್ರಿಯನೇ !"

ಕಾಂ! ಥೇಲಮನ್‌ರಿಗೆ ಯಾವರೀತಿ ಅನನ್ವಿತವಾಗಿ ಅತ್ಯಾಚಾರವನ್ನು ಸಹಿಸಬೇಕಾಯಿತು, ಹಾಗೂ ಇಷ್ಟಾದರೂ ಕೂಡ ಅವರು ತನ್ನ ಕಮ್ಯುನಿಸ್ಟ್ ನಿಷ್ಠೆಗೆ ಹೇಗೆ ಅಚಲನಾಗಿ ನಿಂತರು, ಅಂತಿಮ ವಿಜಯ ಸಾಮ್ಯವಾದದ್ದೇ ಎಂಬುದರಲ್ಲಿ ಅವರ ವಿಶ್ವಾಸ ಅದೆಷ್ಟು ಪ್ರಚಂಡವಾಗಿತ್ತು ಇವೆಲ್ಲವೂ ಅವರು ಜೇಲಿನಿಂದ ಗೆಳೆಯನೊಬ್ಬನಿಗೆ ಕಳಿಸಿದ ಪತ್ರವೊಂದರ ಮೂಲಕ ಕಂಡು ಬರುತ್ತವೆ.

ಈ ಪತ್ರದಲ್ಲಿಯ ಕೆಲವು ಅವತರಣಿಕೆಗಳನ್ನು ನಾವು ಇಲ್ಲಿ ಮುಂದಿಡುತ್ತಿದ್ದೇವೆ.]

3 ಮಾರ್ಚ 1933 ರಂದು ಬರ್ಲಿನ್‌ನಲ್ಲಿಯ ನನ್ನ ಕೋಣೆಯಲ್ಲಿ ನನ್ನನ್ನು ಬಂಧಿಸಲಾಯಿತು. ಒಬ್ಬ ಲೆಫ್ಟನೆಂಟ್ ಹಾಗೂ 20 ಜನ ಪೋಲೀಸರು ಪಿಸ್ತೂಲು ಹಿಡಿದು ಕೋಣೆಯಲ್ಲಿ ಧುಮುಕಿದರು ಹಾಗೂ ನನ್ನ ಕೈಗಳಿಗೆ ಬೇಡಿ ಹಾಕಿದರು. ಸಮೀಪದ ಪೋಲೀಸ್ ಸ್ಟೇಶನ್ನಿನಲ್ಲಿ ಹೆಸರಿಗೆ ಮಾತ್ರ ತಪಾಸಣೆ ನಡೆಸಲಾಯಿತು. ನನ್ನ ಹೇಳಿಕೆಯನ್ನು ತೆಗೆದುಕೊಳ್ಳಲಾಗಲಿಲ್ಲ. ಐದು ತಾಸು ನಿಲ್ಲಿಸಿದ ಬಳಿಕ ನನ್ನನ್ನು ಒಂದು ಕೊಠಡಿಗೆ ರವಾನಿಸಿದರು. ಈ ಎಲ್ಲ ಅವಧಿಯಲ್ಲಿ ಅನೇಕ ರೌಡಿಗಳು ನನ್ನ ಕೊಠಡಿಗೆ ಬಂದು ಬೆದರಿಕೆ ಕೊಡುತ್ತಿದ್ದರು, "ನೆನಪಿರಲಿ, ವೇಳೆ ಬಂದ ಕೂಡಲೆ ನಿನ್ನನ್ನು ಹೊರಗೆಳೆದು ತರುವೆವು ಹಾಗೂ ಅದೇ ನಿನ್ನ ಕೊನೆಯ ಕ್ಷಣವಾಗಿದ್ದೀತು."

ಈ ಜೈಲಿನಲ್ಲಿದ್ದಾಗ ನಾನು ಜರ್ಮನಿಯ ಜನರಲ್ ಪ್ರೊಸೆಕ್ಯೂಟರ್‌ಗೆ ಪತ್ರ ಬರೆದು ನನ್ನ ವಿಚಾರಣೆಯನ್ನು ಬೇಗ ನಡೆಸಲು ಕೇಳಿಕೊಂಡೆ. ಕಾರಣ ನಾನು ಯಾವ ತಪ್ಪು ಮಾಡಿದಂತೆಯೂ ನನಗೆ ಗೊತ್ತಿರಲಿಲ್ಲ. ನನ್ನ ವರ್ಗಾವಣೆ ಕಾನ್ಸಂಟ್ರೇಶನ್ ಕ್ಯಾಂಪಿಗೆ ಆಗಬಾರದೆಂಬುದಷ್ಟೇ ನನ್ನ ಪತ್ರ ಬರೆಯುವುದರ ಹಿಂದಿನ ಉದ್ದೇಶವಾಗಿತ್ತು. ಹಾಗೂ ಈ ಉಪಾಯ ಸಫಲವಾಯಿತು. ಮೇ 23 ರಂದು ಬರ್ಲಿನ್‌ನ ಸ್ಥಾನಬದ್ಧಗ್ರಹದಲ್ಲಿ, ಹಳೆಯ—'ಮೋಆಬಿಟ್' ಜೈಲಿನಲ್ಲಿ ನನ್ನ ವರ್ಗಾವಣೆ ಆಯಿತು. ಇಲ್ಲಿ ಎರಡೂವರೆ ' ವರ್ಷಗಳ ಕಾಲ ನನ್ನ ವಿಚಾರಣೆ ನಡೆಯಿತು. ಪ್ರತಿಸಾರಿ 4 ಅಧಿಕಾರಿಗಳಿರುತ್ತಿದ್ದರು ಹಾಗೂ ಕೆಲವು ಬಾರಿಯಂತೂ ಸತತ 10 ತಾಸುಗಳ ವರೆಗೆ ಈ ವಿಚಾರಣೆ ಸಾಗುತ್ತಿತ್ತು.

ನಿಜವಾದ ಕ್ರಾಂತಿಕಾರಿಯ ವರ್ತನೆ

ಇಷ್ಟೆಲ್ಲ ಇದ್ದರೂ ಕೂಡ ರಾಜಕೀಯ ಒಬ್ಬ ಕ್ರಾಂತಿಕಾರಿಯು ಹೇಗೆ ವರ್ತಿಸಬೇಕೋ ಹಾಗೆಯೇ ನಾನು ವರ್ತಿಸುತ್ತಿದ್ದೆ. ಕಮ್ಯುನಿಸ್ಟ್ ಚಳವಳಿಯ ಮುಖಂಡ ಎಂದಾಗಿ ನಾನು ಪಕ್ಷದ ಕೇಂದ್ರೀಯ ಸಮಿತಿಯ ಹಾಗೂ ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್‌ನ ಎಲ್ಲ ನಿರ್ಣಯಗಳನ್ನೂ ಎತ್ತಿ ಹಿಡಿದಿದ್ದೆ; ಹಾಗೂ ಆ ಕುರಿತಾದ ಎಲ್ಲ ಜವಾಬ್ದಾರಿಯನ್ನೂ ನಾನು ಸ್ವೀಕರಿಸಿದ್ದೆ. ಪಕ್ಷದ ಮುಖಂಡರ ಹಾಗೂ ಕಾರ್ಯಕರ್ತರ ಹೆಸರು ಹಾಗೂ ಠಿಕಾಣೆಗಳನ್ನು ಹೇಳಲು ನಾನು ದೃಢವಾಗಿ ನಿರಾಕರಿಸಿದ್ದಂತೂ ಆಯಿತು, ಆದರೆ ಪ್ರತಿಸಲ ನಾನು ದಿಟ್ಟತನದಿಂದ ಹಾಗೂ ಕರ್ತವ್ಯಕ್ಕೆ ಎಚ್ಚರವಾಗಿದ್ದುಕೊಂಡೇ ವರ್ತಿಸಿದೆ. ತಪಾಸಣೆ ನಡೆಸುವ ಅಧಿಕಾರಿಗಳು ಅನೇಕ ತಂತ್ರಗಳನ್ನು ಬಳಸಿದರು, ನಾಟಕ ಹೂಡಿದರು ಆದರೆ ತಪಾಸಣೆಯ ಸಂಪೂರ್ಣ ಅವಧಿಯಲ್ಲಿ ಅವರಿಗೆ ನನ್ನನ್ನೆಂದೂ ಕತ್ತರಿಯಲ್ಲಿ ಹಿಡಿಯಲು ಸಾಧ್ಯವಾಗಲಿಲ್ಲ. ನನ್ನ ಸಹಕಾರಿಗಳ ಅಥವಾ ಕಮ್ಯುನಿಸಮ್‌ದ ಧ್ಯೇಯದ ವಿಶ್ವಾಸಘಾತ ನನ್ನಿಂದ ಎಂದೂ ಆಗಲಿಲ್ಲ. ಅನೇಕ ಬಾರಿ ಪ್ರಕರಣ ಬಹಳ ಬಿಸಿಯಾಗುತ್ತಿತ್ತು, ತುಂಬ ಜೋರಾಗಿ ಕಿಡಿಗಳೇಳುತ್ತಿದ್ದವು ಹಾಗೂ ಇದರಿಂದಾಗಿ ತಪಾಸಣೆ ಇನ್ನಷ್ಟು ಬೆಳೆದುಕೊಳ್ಳುತ್ತಿತ್ತು. ಆದರೆ ಇವಾವುದರ ಲಾಭವೂ ಅವರಿಗಾಗಲಿಲ್ಲ. ಎಲ್ಲ ತರದಿಂದ ಹೆಣಗಿದರೂ ಕೂಡ ಯಾವಾಗ ನನ್ನಿಂದ ಅವರಿಗೆ ಯಾವುದೇ ಬಗೆಯ ತಪ್ಪೊಪ್ಪಿಗೆ ಹೇಳಿಕೆ ದೊರೆಯಲಿಲ್ಲವೋ ಆಗ ಅವರಿಗೆ ಗೆಸ್ಟಾಪೋ (ನಾಝಿ ಗುಪ್ತ ಪೋಲೀಸ್) ನೆರವು ಪಡೆಯಬೇಕಾಯಿತು.

1934ರ ಜನವರಿಯಲ್ಲಿ ನಾಲ್ಕು ಗೆಸ್ಟಾಪೋ ಅಧಿಕಾರಿಗಳು ನನ್ನನ್ನು 'ಮೊಆಬಿಟ್' ಸೆರೆಮನೆಯಿಂದ ನಾಲ್ಕನೆಯ ಮಹಡಿಯಲ್ಲಿಯ ತಮ್ಮ ಮುಖ್ಯ ಕಚೇರಿಗೆ ಒಯ್ದರು. ಅಲ್ಲಿ ವರಿಷ್ಠ ಹಾಗೂ ಮಧ್ಯಮ ದರ್ಜೆಯ ಎಂಟು ಗೆಸ್ಟಾಪೋ ಅಧಿಕಾರಿಗಳು ಹಾಜರಿದ್ದರು, ಹಾಗೂ ನನ್ನನ್ನು ಕಾಡಿಸುವದಕ್ಕಾಗಿ ಅವರು ಮುದ್ದಾಮಾಗಿ ಹಂಗಿಸುವ ಧಾಟಿಯಲ್ಲಿ "ಲಾಲ ಸಲಾಮು" ಎಂದು ಮುಷ್ಟಿಯೆತ್ತಿದರು.

ಸಂಜೆ 5 ರಿಂದ 9-30ವರೆಗಿನ ನಾಲ್ಕೂವರೆ ತಾಸುಗಳಲ್ಲಿ ಅಲ್ಲಿ ನಡೆಯಿತೆಂಬುದನ್ನು ವರ್ಣಿಸುವದು ಅಶಕ್ಯಪ್ರಾಯವೇ ಸರಿ. ನಾನು ತಪ್ಪೊಪ್ಪಿಗೆ ಹೇಳಿಕೆ ನೀಡಬೇಕು, ಮೊದಲು ಬಂಧಿಸಲಾಗಿದ್ದ ಕಾಮ್ರೇಡರ ಕುರಿತು, ಅವರ ರಾಜಕೀಯ ಕಾರ್ಯದ ಕುರಿತು ಮಾಹಿತಿ ನೀಡಬೇಕು ಎಂಬ ಉದ್ದೇಶದಿಂದ ಕಲ್ಪನೆಗೂ ನಿಲುಕದಷ್ಟು ಕ್ರೂರ ರೀತಿಯಲ್ಲಿ ನನ್ನ ಮೇಲೆ ಅತ್ಯಾಚಾರ ವೆಸಗಿದರು. ಮೊದಲು ಅವರು ಆಗ್ರಹ ವಿನಂತಿಗಳಿಂದ ಶುರು ಮಾಡಿದರು. ಆದರೆ ಈ ಉಪಾಯ ಒಂದಿಷ್ಟೂ ಫಲಕಾರಿಯಾಗಲಿಲ್ಲ. ನಂತರ ಅತ್ಯಂತ ಪಾಶವೀ ಶರೀರ ಬಲದ ಉಪಯೋಗ ನಡೆಸಲಾಯಿತು, ನನ್ನ ಹಲ್ಲುಗಳನ್ನು ಮುರಿದುಹಾಕಲಾಯಿತು. ಆದರೆ ಅದರಿಂದಲೂ ಏನೂ ಪ್ರಯೋಜನವಾಗಲಿಲ್ಲ.

ನಾಝಿ ಕ್ರೂರತನದ ನಮೂನೆಗಳು

ನಂತರ ಮೋಹವಿದ್ಯೆಯ (ಹಿಪ್ನೊಟಿಸಂ) ಪ್ರಯೋಗವನ್ನು ನಡೆಸಲಾಯಿತು. ಆದರೆ ಆ ವೇಳೆಯ ನನ್ನ ಸದೃಢವಾದ ಆರೋಗ್ಯದಿಂದಾಗಿ ಅದರ ಪರಿಣಾಮ ನನ್ನ ಮೇಲೆ ಒಂದಿಷ್ಟೂ ಆಗಲಿಲ್ಲ. ಆ ಮಾಂತ್ರಿಕನು ಸತತ ಮುಕ್ಕಾಲು ಗಂಟೆ ಎಲ್ಲ ತರಹದ ತಂತ್ರ ಬಳಸಿದನು; ಆದರೆ ನಾನು ಅತ್ಯಂತ ಶಾಂತ ಹಾಗೂ ಧೀರಗಂಭೀರನಾಗಿದ್ದುಕೊಂಡೆ. ಹೀಗೆ ಮೂರುವರೆ ತಾಸು ಕಳೆದವು. ಆದರೆ ನಾಟಕದ ಪರಾಕಾಷ್ಠತೆ ಕೊನೆಯ ಅಂತದಲ್ಲಿ ಆಗುವುದಿತ್ತು. ನನ್ನ ಎಲ್ಲ ವಸ್ತ್ರಗಳನ್ನೂ ತೆಗೆದು ಹಾಕಲಾಯಿತು. ಇಬ್ಬರು ಗೆಸ್ಟಾಪೋ ಆಸಾಮಿಗಳು ನನ್ನನ್ನು ಟೇಬಲ್ಲೊಂದರ ಮೇಲೆ ಮಲಗಿಸಿದರು. ಒಬ್ಬನು ಘೇಂಡಾ ಪ್ರಾಣಿಯ ಚರ್ಮದ ಭಾರವಾದ ಚಾಬೂಕೊಂದನ್ನು (ಚಾಟಿ)

ಅನುವಾದ :

ಸುಧೀಂದ್ರ ಕುಲಕರ್ಣಿ

ತೆಗೆದುಕೊಂಡು ಬಿಡುವಿಲ್ಲದೇ ಒಂದೇ ಸಮನೆ ನನ್ನನ್ನು ಬಡಿಯತೊಡಗಿದನು. ಅಸಹ್ಯವಾದ ವೇದನೆಯಿಂದಾಗಿ ನಾನು ಅನೇಕ ಬಾರಿ ಚೀತ್ಕರಿಸಿದೆ. ನಂತರ ಅವರು ನನ್ನ ಬಾಯಿ ಬಿಗಿದು ಹಾಕಿ ಮುಷ್ಟಿಪ್ರಹಾರ ನಡೆಸಿದರು. ನಂತರ ನನ್ನ ಬಾಯಿ, ಎದೆ, ಬೆನ್ನುಗಳ ಮೇಲೆ ಸತತವಾಗಿ ಚಾಬೂಕಿನ ಏಟುಗಳ ಮಳೆಗರೆಯಲಾಯಿತು.' ನಾನು ಹೊಟ್ಟೆಯ ಮೇಲೆಯೇ ಬಿದ್ದುಕೊಂಡದ್ದರಿಂದ ಗಟ್ಟಿಯಾಗಿ ನೆಲ ಹಿಡಿದುಕೊಂಡಿದ್ದೆ. ಅವರ ಒಂದೂ ಪ್ರಶ್ನೆಗೆ ಕೂಡ ಒಂದು ಶಬ್ದ ಮಾತ್ರದ ಉತ್ತರವನ್ನೂ ಕೊಡಲಿಲ್ಲ. ಅವರು ನನ್ನನ್ನು ತುಳಿದರು, ಒದ್ದರು. ನಾನು ನನ್ನ ಬಾಯಿಯನ್ನು ಉಳಿಸಿಕೊಳ್ಳಲು ಪ್ರಯತ್ನ ಪಡುತ್ತಿದ್ದೆ. ಕೊನೆಗೆ ನಾನು ದಣಿದು ಹೋದೆ. ನನ್ನ ಹೃದಯಕ್ರಿಯೆ ಕೂಡ ಸರಿಯಾಗಿ ಸಾಗದಾಯಿತು. ನನಗೆ ಏನೂ ಕಾಣಿಸದಾಯಿತು ಹಾಗೂ ಕೇಳಿಸದಾಯಿತು.

ಬಾಯಾರಿಕೆಯಿಂದ ನಾನು ಅದೆಷ್ಟು ವ್ಯಾಕುಲನಾಗಿದ್ದೆನೆಂದರೆ ನನ್ನ ಬಾಯಿಯಿಂದ ಬುರುಗು (ನೊರೆ) ಬರತೊಡಗಿತ್ತು ಹಾಗೂ ನಾನು ಹೆಚ್ಚು ಕಡಿಮೆ ತುಸಿದುಕೊಂಡಿದ್ದೆ. ನನ್ನ ಪ್ರಜ್ಞೆ ಅರ್ಧಕ್ಕಿಳಿದಿತ್ತು. ಆದರೆ ನಾನು ಸಂಪೂರ್ಣ ಪ್ರಜ್ಞಾಹೀನನಾಗಿರಲಿಲ್ಲ. ಈಗ ನನಗೆ ಅದ್ಯಾವ ಯಾತನೆಯೂ ತಿಳಿಯುತ್ತಿರಲಿಲ್ಲ. ಈ ಪೀಡೆ ಯಾವಾಗ ಹಾಗೂ ಹೇಗೆ ಮುಗಿಯುತ್ತದೋ ಎಂಬುದಷ್ಟೇ ಪ್ರಶ್ನೆಯಾಗುಳಿಯಿತು.

ಅಕಸ್ಮಾತ್ ಒಬ್ಬ ಮನುಷ್ಯ ಓಡುತ್ತ ಕೋಣೆಯಲ್ಲಿ ಬಂದನು ಹಾಗೂ ಸಾವಕಾಶವಾಗಿ ಅವನು ಏನೋ ಪಿಸುಗುಟ್ಟಿದನು. ನನ್ನ ಕೂಗುವಿಕೆ ಆ ಬಿಲ್ಡಿಂಗಿನಲ್ಲಿಯ ನೌಕರರ ಹಾಗೂ ಇತರರ ಕಿವಿಗಳಿಗೆ ಮುಟ್ಟಿತ್ತು. ಅವನು ತಪಾಸಣೆಯನ್ನು ಬೇಗನೇ ಮುಗಿಸುವುದಕ್ಕೆ ಸೂಚಿಸಿದನು. ಹಾಗೂ ರಾತ್ರಿ 9-30 ಗಂಟೆಗೆ ಆ ಕಟುಕರು ಚಿತ್ರಹಿಂಸೆಯ ಈ ಆನಂದಕ್ರೀಡೆಯನ್ನು ನಿಲ್ಲಿಸಿದರು. ರಕ್ತ ಹರಿಯುತ್ತಿದ್ದ ನನ್ನ ಗಾಯಗಳ ಮೇಲೆ ಅವರು ಒಂದು ಟಾವೆಲನ್ನು ಕಟ್ಟಿದರು. ಕುತ್ತಿಗೆಯ ಬಳಿಯ ಬಹುಭಾಗ ನೋವಿನಿಂದ ಬಾತುಕೊಂಡಿತ್ತು. ಆದರ ಮೇಲೆ ಅವರು ಮಫ್ಲರ್ ಸುತ್ತಿದರು. ನನ್ನನ್ನು ಟೇಬಲ್ಲಿನ ಮೇಲೆ ಕೂಡಿಸಿ ಗೋಡೆಯ ಕಡೆಗೆ ಮುಖ ತಿರುವಿಸಲು ಹೇಳಿದರು, ಹಾಗೂ ಹಿಂತಿರುಗಿ ನೋಡಿದ್ದಾದರೆ ತಕ್ಷಣ ಗುಂಡಿಕ್ಕುವೆವು ಎಂದು ಬೆದರಿಕೆ ಹಾಕಿದರು. ಗೆಸ್ಟಾಪೋದ ಇಬ್ಬರು ಧಡೂತಿಗಳು ನನ್ನ ಕಡೆಗೆ ಪಿಸ್ತೂಲು ಗುರಿ ಹಿಡಿದು ನಿಂತೇ ಇದ್ದರು. ಈ ಬಳಿಕ ನನಗೆ ಏನು ಮಾಡುವವರಿದ್ದಾರೆ ಎಂಬುದನ್ನು ನೋಡಲೋಸುಗ ನಾನು ಹಿಂತಿರುಗಿ ನೋಡಿದಕೂಡ. ಆದರೆ ಏನೂ ಆಗಲಿಲ್ಲ. ಅವರು ಬದಿಯ ಭೋಜನಾಲಯದಿಂದ ನೌಕರನೊಬ್ಬನ ಮೂಲಕ ನನಗಾಗಿ ಒಂದಿಷ್ಟು ತಿನ್ನಲು ಹಾಗೂ ಕುಡಿಯಲು ತರಿಸಿದರು. ಆ ನೌಕರನ ಕಣ್ಣುಗಳಲ್ಲಿ ನನ್ನ ಬಗೆ ದಯೆ ಕಂಡುಬರುತ್ತಿತ್ತು. ಆ ನಂತರ ನನ್ನನ್ನ ಲಿಫ್ಟನಿಂದ ಕೆಳಗೊಯ್ದು ಕೆಳಮನೆಯಲ್ಲಿಯ ಒಂದು ಕೋಣೆಯಲ್ಲಿ ಬಂಧಿಸಿಡಲಾಯಿತು.

ಕೋರ್ಟಿನಲ್ಲಿ ಹೇಳಿದ್ದಾದರೆ ಕೊಂದು ಹಾಕುವೆವು !

ಎಂಟು ದಿನಗಳ ಬಳಿಕ ಮತ್ತೊಮ್ಮೆ ಇಬ್ಬರು ಗೆಸ್ಟಾಪೋ ಅಧಿಕಾರಿಗಳ ಎದುರು ಅದೇ ಕೋಣೆಯಲ್ಲಿ ನನ್ನ ತಪಾಸಣೆ ನಡೆಯಿತು, ಹಾಗೂ 24 ಗಂಟೆಗಳನಂತರ ಮೂವರು ಜನರೆದುರು ಪುನಃ ತಪಾಸಣೆ ನಡೆಸಲಾಯಿತು. ನಾನು ನನ್ನ ನಿಲುವನ್ನು ಬದಲಿಸಿರಲಿಲ್ಲ. ಆದ್ದರಿಂದ ನಾನು ಇನ್ನು ಮುಂದೆ ಕೂಡ ಇದೇ ರೀತಿ ವರ್ತಿಸಿದ್ದಾದರೆ ಕೆಲವೇ ದಿನಗಳ ಹಿಂದೆ ಕೊಡಲಾದ ಶಿಕ್ಷೆಯನ್ನು ಚೆನ್ನಾಗಿ ಅರಿವು ಮೂಡುವವರೆಗೆ ಪುನಃ ಕೊಡಲಾಗುವದೆಂದು ಬೆದರಿಸಿದರು.

ಅನಂತರ ಕೂಡಲೇ ನನ್ನನ್ನು ಮತ್ತೊಮ್ಮೆ 'ಮೋಆಬಿಟ'ದ ಸೆರೆಮನೆಗೆ ಒಯ್ಯಲಾಯಿತು. ನನ್ನ ತಪಾಸಣೆಗಾಗಿ ಮೊದಲು ಇದ್ದ ನಾಲ್ವರು ಗೆಸ್ಟಾಪೋ ಅಧಿಕಾರಿಗಳೇ ನನ್ನ ಜೊತೆಗೆ ಬಂದಿದ್ದರು. ದಾರಿಯಲ್ಲಿ ಅವರಲ್ಲಿಯ ಒಬ್ಬ ಮನುಷ್ಯನು ಕಠೋರವಾಗಿ ನನಗೆ ಹೆದರಿಕೆ ಕೊಟ್ಟನು,

— ಕಮ್ಯೂನಿಸ್ಟ್ ಕ್ರಾಂತಿಕಾರಿಯ ಆದರ್ಶ

ತನಿಖೆ ಸಮಯದಲ್ಲಿ ನಡೆದ ಸಂಗತಿಗಳನ್ನು ನಾನು ಕೋರ್ಟಿನಲ್ಲಿ ಜಾಹೀರುಗೊಳಿಸಿದ್ದಾದರೆ ಕೊನೆಯ ವರೆಗೆ ನನ್ನ ಬಾಯಿಮುಚ್ಚಿ ಹಾಕುವ ಹಾಗೆ ಉಪಾಯ ಕೈಕೊಳ್ಳಲಾಗುವುದೆಂದು. ಆದರೆ ನಾನು ಮಾತ್ರ ಮನಸ್ಸಿನೊಳಗೇ ನಿಶ್ಚಯ ಮಾಡಿಕೊಂಡಿದ್ದೆ, ಅಂಥ ಸಂಧಿ ಏನಾದರೂ ದೊರಕಿದರೆ ಅದನ್ನು ಖಂಡಿತ ಬಿಟ್ಟುಕೊಡಬಾರದು ಎಂದು.

ನಮ್ಮ ಮೇಲೆ ಸೆರೆಮನೆಯಲ್ಲಿ ಆ ಅನೇಕ ವರ್ಷಗಳವರೆಗೆ ತಡೆಯಿಲ್ಲದೆ ನಡೆದ ಅತ್ಯಾಚಾರದ ವಿವರಗಳನ್ನು ಯಾರು ಕಂಡು ಹಿಡಿಯಬಲ್ಲರು ?

ನಮ್ಮ ಮೇಲೆ ನಡೆದ ಸತತ ಪ್ರಹಾರಗಳನ್ನು ನಮಗೆ ಸಹಿಸಲು ಸಾಧ್ಯವಾದುದರ ಕಾರಣ ನಾವು ನಮ್ಮ ಭೂಮಿಕೆಯಿಂದ ಕೂದಲಷ್ಟು ಕೂಡ ದೂರ ಸರಿಯಲಿಲ್ಲ ಎಂಬುದನ್ನು ಯಾರಾದರೂ ತಿಳಿದುಕೊಳ್ಳಬಹುದು. ಕೆಲಕೆಲ ಗಳಿಗೆಗಳಲ್ಲಂತೂ ಸೆರೆಮನೆಯ ಆ ವಾತಾವರಣದಲ್ಲಿ ನಮ್ಮ ಸಹನಶಕ್ತಿಯ ಕೊನೆಯ ಹನಿಕೂಡ ಬತ್ತಿಹೋದಂತಾಗುತ್ತಿತ್ತು, ಆದರೂ ನಾವು ಅವಿಚಲಿತರಾಗಿ, ಗಟ್ಟಿ ಮನಸ್ಸಿನವರಾಗಿ, ದುರ್ದಮ್ಯರಾಗಿಯೇ ಉಳಿದೆವು.

ತಾರುಣ್ಯದ ಅತ್ಯಂತ ಉತ್ಸಾಹದಾಯಕ ವರ್ಷಗಳನ್ನು ಕಳೆದುಕೊಳ್ಳಬೇಕಾದುದು; ಅವುಗಳನ್ನು ಬಲಿದಾನ ಮಾಡಬೇಕಾದುದು, ಹಾಗೂ ಪ್ರೌಢಾವಸ್ಥೆಗೆ ಬಂದು ನಿಲ್ಲುವದು ಇದು ನನ್ನ ಪರಿಸ್ಥಿತಿಯಾಯಿತು. ಆದರೆ ಈ ಬಲಿದಾನ, ಈ ಪ್ರೌಢಾವಸ್ಥೆಯಲ್ಲಿಯ ಅತ್ಯಂತ ಕಾರ್ಯಕ್ಷಮ ವರ್ಷಗಳನ್ನು ಬಿಟ್ಟುಕೊಡುವದು ಇದೆಲ್ಲ ನನ್ನ ಧ್ಯೇಯಕ್ಕಾಗಿ ಮಾಡಿದ್ದು. ಹಾಗೂ ಇಂದು ನಾನು ಬಾಳಿನ ಇಂಥ ಒಂದು ಹಂತಕ್ಕೆ ಬಂದು ತಲುಪಿದ್ದೇನೆಂದರೆ ನನ್ನ ಶಕ್ತಿಯೆಲ್ಲ ನಿಧಾನವಾಗಿ ನಶಿಸಿ ಹೋಗುತ್ತಿದೆ. ಕಾರಾಗೃಹದ ಈ ಕಟು ಜೀವನದಲ್ಲಿ ಆಯುಷ್ಯದ ಅನಮೂಲ್ಯ ಕೊಡುಗೆ ಎಂಬಂಥ ವರ್ಷಗಳು, ತಾರುಣ್ಯ ಇವೆಲ್ಲವೂ ಕಸಿದುಕೊಳ್ಳಲ್ಪಟ್ಟವೆ. ನಾನು ನನ್ನ ಹರೆತನದ ವರ್ಷಗಳಲ್ಲಿ ಸ್ವತಂತ್ರನಾಗಿದ್ದೆ, ಮುಕ್ತನಾಗಿದ್ದೆನೆಂಬುದು ಸರಿ, ಆದರೆ ಅಂದಿನಿಂದಲೇ ಈಗಿನ ನನ್ನ ಕಷ್ಟದ ಕೈದಿ ಜೀವನದ ನಾಂದಿ ಕೂಡ ಹಾಕಲ್ಪಟ್ಟಿತು.

ನಾವು ಪರಾಜಿತರಾಗಬೇಕು ಎಂಬುದಕ್ಕಾಗಿ ಅಲ್ಲ, ಆದರೆ ಪರಿಸ್ಥಿತಿಯ ಮೇಲೆ ಗೆಲುವು ಸಾಧಿಸಬೇಕು ಎಂಬುದಕ್ಕಾಗಿ ಜೀವನ ನಮಗೆ ಹೋರಾಡಲು ಕಲಿಸುತ್ತದೆ. ಅದರಿಂದಲೇ ಜೀವನದ ಕಠೋರ ಆದರೆ ಅಪರಿಹಾರ್ಯವಾದ ಭಾಷೆ ತಿಳಿದುಬರತೊಡಗುತ್ತದೆ. ಅದರಿಂದಲೇ ನಾವು ಪುನಃ ತರುಣರಾಗತೊಡಗುತ್ತೇವೆ ಹಾಗೂ ಆಳವಾದ ತೆಗ್ಗಿನಿಂದ ಪುನಃ ಹೊಸ ಜೀವನದ ಕಡೆಗೆ ನಡೆಯತೊಡಗುತ್ತೇವೆ.

ನಾವು ಪರಾಜಿತರಾಗಬೇಕು ಎಂಬುದಕ್ಕಾಗಿ ಅಲ್ಲ, ಆದರೆ ಪರಿಸ್ಥಿತಿಯ ಮೇಲೆ ಗೆಲುವು ಸಾಧಿಸಬೇಕು ಎಂಬುದಕ್ಕಾಗಿ ಜೀವನ ನಮಗೆ ಹೋರಾಡಲು ಕಲಿಸುತ್ತದೆ. ಅದರಿಂದಲೇ ಜೀವನದ ಕಠೋರ ಆದರೆ ಅಪರಿಹಾರ್ಯವಾದ ಭಾಷೆ ತಿಳಿದು ಬರತೊಡಗುತ್ತದೆ. ಅದರಿಂದಲೇ ನಾವು ಪುನಃ ತರುಣರಾಗ ತೊಡಗುತ್ತೇವೆ ಹಾಗೂ ಆಳವಾದ ತೆಗ್ಗಿನಿಂದ ಪುನಃ ಹೊಸ ಜೀವನದ ಕಡೆಗೆ ನಡೆಯತೊಡಗುತ್ತೇವೆ

ಧ್ಯೇಯಕ್ಕಾಗಿ ಸಮರ್ಪಿತ ಜೀವನ

ಕ್ರಾಂತಿಕಾರಿ ಚಳುವಳಿಯನ್ನು ನಡೆಸುವದಾದರೆ ಅನೇಕ ಮಹಾನ್ ತ್ಯಾಗಗಳನ್ನು ಮಾಡಬೇಕಾಗುತ್ತದೆ ಎಂಬ ಸಂಗತಿ ನಮಗೆ ಅನ್ವಯಿಸುವಂತೆಯೇ ಇತರರಿಗೂ ಅನ್ವಯಿಸುತ್ತದೆ. ಆದರೆ ಇದೆಲ್ಲವೂ ಯಾತಕ್ಕಾಗಿ ? ಯಾವ ಧ್ಯೇಯ್ಯಪ್ರಾಪ್ತಿಗಾಗಿ ? ಇಂದು ಲಕ್ಷಗಳ ಸಂಖ್ಯೆಯಲ್ಲಿ ಯಾವ ಜನತೆ ಬಹುದೊಡ್ಡ ದೃಢತೆಯಿಂದ ಹಾಗೂ ನಿರ್ಧಾರದಿಂದ ಹೋರಾಡುತ್ತಿದೆಯೋ ಅವರಿಗೆ ಈ ಪ್ರಶ್ನೆಯಲ್ಲಿ ಆಸಕ್ತಿ ಇದೆ. ಈ ಐತಿಹಾಸಿಕ ಪ್ರಶ್ನೆಯು ಹೆಚ್ಚುಕಡಿಮೆ ಪ್ರಮಾಣದಲ್ಲಿ ಸುಮಾರಾಗಿ ಸಕಲ ಶ್ರಮಿತ ಜನಸಮುದಾಯದ ಎದುರು ನಿಂತಿದೆ ನನಗೂ ಮಡದಿ ಮಕ್ಕಳು, ಆಪ್ತೇಷ್ಟರು ಇದ್ದಾರೆ. ನಾನು ಜರ್ಮನನಾಗಿದ್ದೇನೆ. ಹಾಗೂ ನನ್ನ ಬಳಿ ದೊಡ್ಡ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಚಳುವಳಿಯ ಅನುಭವ ಇದೆ. ನಾನು ಯಾವ ಜನರ ಮಧ್ಯದಲ್ಲಿ ಹುಟ್ಟಿ ಬೆಳೆದೆನೋ, ಯಾವ ಜನರನ್ನು ಪ್ರೇಮಿಸುತ್ತ ಬಂದಿದ್ದೇನೆಯೋ ಆ ಜನ ಜರ್ಮನರಾಗಿದ್ದಾರೆ. ನಾನು ಯಾವ ದೇಶದ ಬಗ್ಗೆ ಅಭಿಮಾನ ಹೊಂದಿದ್ದೇನೆಯೋ ಆ ಜರ್ಮನಿ ದೇಶ ಸ್ವಾಭಿಮಾನಿ ಹಾಗೂ ಸಾಹಸಿ ದೇಶವಾಗಿದೆ. ಜರ್ಮನ್ ಕಾರ್ಮಿಕರ ರಕ್ತದೊಂದಿಗೆ, ಅವರ ಮಾಂಸ ಮೂಳೆಗಳೊಂದಿಗೆ ನನ್ನ ರಕ್ತ ಹಾಗೂ ಮೂಳೆ ಮಾಂಸಗಳು ಏಕರೂಪವಾಗಿದೆ. ಅಂತೆಯೇ ಆ ಕ್ರಾಂತಿಕಾರಿ ವರ್ಗದ ಒಬ್ಬ ಪುತ್ರನಾದ ನಾನು ನಂತರ ವರ್ಗದ ಕ್ರಾಂತಿಕಾರಿ ಮುಖಂಡನಾದೆ. ನನ್ನ ಸಂಪೂರ್ಣ ಜೀವನ ಹಾಗೂ ನನ್ನ ಎಲ್ಲ ಪ್ರಯತ್ನ ದುಡಿಮೆಗಳು ಕೇವಲ ಶ್ರಮಿತ ಜನತೆಯ ಹಿತಕ್ಕಾಗಿಯೇ ಅರ್ಪಿತವಾಗಿದ್ದವು. ನನ್ನ ಜ್ಞಾನ, ನನ್ನ ಶಕ್ತಿ, ನನ್ನ ಅನುಭವ, ನನ್ನ ಸಂಪೂರ್ಣ ಜೀವಿತವೇ ಈ ಜರ್ಮನಿಯ ಉಜ್ವಲ ಭವಿಷ್ಯಕ್ಕಾಗಿ, ಸಮಾಜವಾದದ ವಿಜಯಕ್ಕಾಗಿ, ಸ್ವಾತಂತ್ರ್ಯಕ್ಕಾಗಿ ಹಾಗೂ ಹೊಸ ಜರ್ಮನಿ ದೇಶ ಉದಯಿಸಬೇಕು ಎಂಬುದಕ್ಕಾಗಿ ಇಡಿಯಾಗಿ ಮುಡಿಪಾಗಿಡಲ್ಪಟ್ಟಿತ್ತು.

ನಾವು ಯಾವಾಗ ವ್ಯಕ್ತಿಮತ್ವದ ಬಗ್ಗೆ ಮಾತನಾಡುತ್ತೇವೆಯೋ ಆಗ ಕೆಲವು ಖಾಸ (unique) ಹಾಗೂ ವೈಶಿಷ್ಟ್ಯಪೂರ್ಣ ಗುಣಗಳನ್ನು ಹೊಂದಿದ ವ್ಯಕ್ತಿಗಳು ನಮ್ಮ ಕಣ್ಣೆದುರಿಗೆ ಬರುತ್ತಾರೆ. ಒಂದು ಕಾಲ ಹೀಗೆ ಬರುವದು ಯಾವಾಗ "ವ್ಯಕ್ತಿಮತ್ವ" ಈ ಶಬ್ದದ ಅರ್ಥವನ್ನು ಸಾಧಾರಣವಾಗಿ ಈ ರೀತಿಯಾಗಿ ಹಚ್ಚಲಾಗುವದು— ಸ್ವಭಾವ ಅಧಿಕ ಮಾನಸಿಕ ಗುಣಮಟ್ಟ. ಯಾವ ವ್ಯಕ್ತಿಯು ತನ್ನನ್ನು ತಾನೇ ಅಕ್ಷರಶಃ ಹಾಗೂ ಸಂಪೂರ್ಣವಾಗಿ ಜನತೆಯ ಕಾರ್ಯಕ್ಕಾಗಿ ಸವೆಸಿಕೊಳ್ಳುತ್ತಾನೋ ಅವನ ವರ್ಣನೆಯನ್ನು ಈ ಶಬ್ದದಿಂದ ಮಾಡಬಹುದು. ಸ್ವಭಾವದ ಈ ಪೂರ್ಣತೆ ಆ ವ್ಯಕ್ತಿಯ ಸ್ಥಾಯೀ ಗುಣವಾಗಿರಬೇಕು. ಕಾರಣ ವ್ಯಕ್ತಿಯೊಬ್ಬನ ಅರ್ಹತೆ ಹಾಗೂ ಅವನ ಸ್ಥಾನಗಳು ಅವನ ಸ್ವಭಾವದ ಮೇಲೆ ಅವಲಂಬಿಸಿರುತ್ತವೆ. ಅವನ ವ್ಯಕ್ತಿಮತ್ವದಲ್ಲಿ ಎಲ್ಲಕ್ಕಿಂತ ಎದ್ದು ಕಾಣಿಸುವಂಥದು ಏನಿರುತ್ತದೆ ? ಅದೆಂದರೆ ಸದಾಸರ್ವದಾ ತನ್ನ ಸಂಪೂರ್ಣ ಜೀವನವನ್ನು ಯಾವುದಾದರೊಂದು ಉಚ್ಚ ಹಾಗೂ ಉದಾತ್ತ ಧ್ಯೇಯ್ಯಕ್ಕಾಗಿ ವ್ಯಯಿಸಲು ಅತನು ನಡೆಸುವ ಅವಿಶ್ರಾಂತ ಚಟುವಟಿಕೆ. ಜೀವನದ ಇತಿಹಾಸ ಬಹಳ ಕಠೋರವಾಗಿದೆ, ಹಾಗೂ ವ್ಯಕ್ತಿಯ ಕಡೆಯಿಂದ ಅದರ ಬೇಡಿಕೆ ಯಾವಾಗಲೂ ಒಂದೇ ಆಗಿರುತ್ತದೆ— ಉಚ್ಚ ಜೀವನ ಸ್ಥಾಪಿಸುವದಕ್ಕಾಗಿ ಅವನು ತನ್ನ ಸಂಪೂರ್ಣ ಜೀವನವನ್ನು ಅದರ ಪ್ರತಿಯೊಂದು ಕ್ಷಣವನ್ನು, ಸಮರ್ಪಿಸಬೇಕು. ನೀವು ಹಾಗೂ ನಾನು, ನಮ್ಮ ಈ ಮಹಾನ್ ಧ್ಯೇಯಕ್ಕಾಗಿ ಹೋರಾಡುತ್ತಿರುವ ನಾವೆಲ್ಲ ಕಾಮ್ರೇಡರೂ ಬಲಶಾಲಿಗಳು, ದಿಟ್ಟ ಹೃದಯರು, ಸಂಘರ್ಷಶೀಲರು ಹಾಗೂ ಭವಿಷ್ಯದ ಮೇಲೆ ಅಭೇದ್ಯ ವಿಶ್ವಾಸವುಳ್ಳವರಾಗಿರಬೇಕು; ಕಾರಣ ಕ್ರಾಂತಿಯ ಸೈನಿಕನಾಗುವುದೆಂದರೆ ಕ್ರಾಂತಿ ನಮ್ಮ ಅವಿಚಲ ಶ್ರದ್ಧಾಸ್ಥಾನವಾಗಿರುವದು. ಹಾಗೂ ಈ ಶ್ರದ್ಧೆಯು ಜೀವನ ಮರಣದ ಹೋರಾಟಗಳೊಳಗಿಂದ ಬಿಸಿಯಾಗಿಂದು ವಿಶುದ್ಧವಾಗಿ ಹೊರಬಂದಿರಬೇಕು. ಇದರರ್ಥವೆಂದರೆ ಆ ವ್ಯಕ್ತಿಯು ಕ್ರಾಂತಿಕಾರ್ಯಕ್ಕಾಗಿ ತನ್ನ ಸಕಲಜೀವನವನ್ನು ಶ್ರದ್ಧೆಯಿಂದ, ವಿಶ್ವಾಸದಿಂದ ಹಾಗೂ ಯಾವುದೇ ಪರಿಸ್ಥಿತಿಯಲ್ಲೂ ಹೋರಾಟಸಿದ್ಧನಾಗಿ ಜೀವಿಸಬೇಕು. ಯಾವ ಜ್ವಾಲೆ ನಮ್ಮ ಹೃದಯದಲ್ಲಿ ನಿರಂತರವಾಗಿ ಧಗಧಗಿಸುತ್ತಿದೆಯೋ ಹಾಗೂ ನಮ್ಮ ಬಾಳೆಲ್ಲವನ್ನೂ ವ್ಯಾಪಿಸಿದೆಯೋ ಅದು ಇಂದು ನಮ್ಮ ಜೀವನದ ರಣಕ್ಷೇತ್ರದ ಮೇಲೆ ನಮ್ಮ ದಾರಿಯನ್ನು ಬೆಳಗುವ ದಿವ್ಯ ದೀವಟಿಗೆ (ಪಂಜು)ಯಾಗಿದೆ. ಸಾಹಸಿ, ಸ್ಥಿರ ಹಾಗೂ ಧೀರ ವೃತ್ತಿ ಹಾಗೂ ಯಶಸ್ಸಿನ ಬಗ್ಗೆ ದುರ್ದಮ್ಯ ಆತ್ಮವಿಶ್ವಾಸ ಈ ಗುಣಭಾಂಡಾರದ ಆಧಾರದಿಂದಲೇ ನಾವು ಭವಿಷ್ಯವನ್ನು ಬದಲಿಸಬಲ್ಲೆವು, ಬೆಳಗಬಲ್ಲೆವು. ಇತಿಹಾಸವು ನಮ್ಮೆದುರಿಗೆ ಇಟ್ಟ ಮಹಾನ್ ಐತಿಹಾಸಿಕ ಕಾರ್ಯದಲ್ಲಿಯ ನಮ್ಮ ಕ್ರಾಂತಿಕಾರಿ ಕರ್ತವ್ಯಭಾಗವನ್ನು ನಿರ್ವಹಿಸಬಲ್ಲೆವು ಹಾಗೂ ನಿಜವಾದ ಕಮ್ಯೂನಿಸಮ್‌ದ ಅಂತಿಮ ವಿಜಯವನ್ನು ನಿಶ್ಚಿತಗೊಳಿಸಬಲ್ಲೆವು.

"ಅಸಮರ್ಥ ಕಾರ್ಮಿಕ ಮಂತ್ರಿ: ಜಾರಿಯಾಗದ ಕನಿಷ್ಠ ವೇತನ"

17-6-82 ರಂದು ಮೈಸೂರಿನಲ್ಲಿ ಪತ್ರಿಕಾಗೋಷ್ಠಿಯನುದ್ದೇಶಿಸಿ ಮಾತನಾಡಿದ ರಾಜ್ಯ ಸಿ.ಐ.ಟಿ.ಯು ಅಧ್ಯಕ್ಷರಾದ ಕಾಂ|| ಸೂರ್ಯನಾರಾಯಣ ರಾವ್‌ರವರು ಬಂಟ್ವಾಳದಲ್ಲಿ ಇತ್ತೀಚಿಗೆ ನಡೆದ ಬೀಡಿ ಕಾರ್ಮಿಕರ ರಾಜ್ಯ ಸಮ್ಮೇಳನದಲ್ಲಿ ತೆಗೆದುಕೊಳ್ಳಲಾದ ಪ್ರಮುಖ ತೀರ್ಮಾನಗಳನ್ನು ವಿವರಿಸಿದರು. ಕಳೆದ ಐದು ವರ್ಷಗಳಿಂದ ಕಾರ್ಮಿಕರಿಂದ ಪ್ರಾವಿಡೆಂಟ್ ಫಂಡ್‌ಗಾಗಿ ಮಾಲೀಕರು ಹಣ ಕಡಿತ ಮಾಡುತ್ತಿದ್ದು ಹೀಗೆ ಸಂಗ್ರಹಿಸಲಾದ ಹಣ ರೂ. 40 ಕೋಟಿಯಷ್ಟಾಗಬಹುದು. ಆದರೆ ಈ ಬಗ್ಗೆ ಯಾವುದೇ ರಶೀಧಿಯನ್ನಾಗಲಿ, ಲೆಕ್ಕವನ್ನಾಗಲಿ ಕಾರ್ಮಿಕರಿಗೆ ನೀಡದೆ ಮಾಲೀಕರು ಮೋಸ ಮಾಡುತ್ತಿದ್ದಾರೆಂದು ಅವರು ಹೇಳಿದರು.

ಸಮ್ಮೇಳನ ನಿರ್ಧಾರದಂತೆ 15-6-82 ರಂದು ಬೀಡಿ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸರಕಾರಿ ಕಛೇರಿಗಳ ಎದುರು ಬೀಡಿ ಕಾರ್ಮಿಕರು ಪಿಕೆಟಿಂಗ್ ಮಾಡಿದಾಗ ಮಂಗಳೂರಿನ ಪೋಲಿಸರು ನಡೆಸಿದ ಲಾಠಿ ಚಾರ್ಜನ್ನು ಕಾಂ|| ಸೂರಿ ತೀವ್ರವಾಗಿ ಖಂಡಿಸಿ ಈ ಬಗ್ಗೆ ಸೂಕ್ತ ವಿಚಾರಣೆಗೆ ಒತ್ತಾಯಿಸಿದರು.

ಮಹಾರಾಷ್ಟ್ರ ಕಾರ್ಮಿಕ ಸಂಘಗಳ ಮಾನ್ಯತಾ ಮಸೂದೆಯ ರೀತಿಯದ್ದೇ ಕರಾಳ ಮಸೂದೆಯನ್ನು ಕರ್ನಾಟಕದಲ್ಲೂ ಜಾರಿಗೆ ತರುವ ಇಲ್ಲಿನ ಸರಕಾರದ ಮನೋಭಾವವನ್ನು ತೀವ್ರವಾಗಿ ವಿರೋಧಿಸಿದ ಕಾಂ|| ಸೂರಿಯವರು ಇದರಿಂದ ಕೈಗೊಂಬೆ ಸಂಘಗಳ ಕುತಂತ್ರದ ಮೂಲಕ ಮಾನ್ಯತೆ ಪಡೆದುಕೊಳ್ಳುವ ಸಾಧ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.

ಮೈಸೂರಿನ ಜಾವಾ ಕಾರ್ಮಿಕರ ಮುಷ್ಕರಕ್ಕೆ ಸಿ. ಐ. ಟಿ. ಯು. ವಿನ ಪೂರ್ಣ ಬೆಂಬಲ ಸಾರಿದ ಅವರು ಕಾರ್ಖಾನೆಗೆ ಲಾಕೌಟ್ ಸಾರಿ ಮಾತುಕತೆಗಳಿಗೆ ಹಾಜರಾಗದಿರುವ ಮಾಲೀಕ ವರ್ಗದ ಧೋರಣೆಯನ್ನು ಖಂಡಿಸಿದರು.

ರಾಜ್ಯದ ಕಾರ್ಮಿಕ ಮಂತ್ರಿಗಳನ್ನು ತೀರಾ "ಅಧಕ್ಷ ಮಂತ್ರಿ" ಎಂದು ಬಣ್ಣಿಸಿದ ಸೂರಿಯವರು ಈ ಮಂತ್ರಿಯ ನಿಲುವು ಹೆಚ್ಚಿನ ಸಂದರ್ಭದಲ್ಲಿ ಮಾಲೀಕರಿಗೆ ನೆರವಾಗುತ್ತದೆ ಎಂದು ಹೇಳಿದರು. ಕಾರ್ಮಿಕರು ಮತ್ತು ಮಾಲೀಕರ ನಡುವಿನ ಮಾತುಕತೆಗಳಲ್ಲಿ ಕಾರ್ಮಿಕ ಅಧಿಕಾರಿಗಳ ಮಧ್ಯಸ್ತಿಕೆಯ ಬದಲು ಪೋಲಿಸರ ಪ್ರವೇಶವಾಗಿ ಭಯದ ವಾತವರಣ ಉಂಟುಮಾಡಲಾಗುತ್ತಿದ್ದು ಇದು ಇಲ್ಲವಾಗಬೇಕೆಂದು ಅವರು ಸರಕಾರವನ್ನು ಒತ್ತಾಯಿಸಿದರು.

ಕನಿಷ್ಠ ವೇತನದ ಜಾರಿ ಇನ್ನೂ ಆಗಿಲ್ಲವೆಂದ ಕಾಂ||ಸೂರ್ಯನಾರಾಯಣ ರಾವ್‌ರವರು ಹೈಕೋರ್ಟಿನಲ್ಲಿ ಕನಿಷ್ಠ ವೇತನದ ಜಾರಿ ಬಗ್ಗೆ ನೀಡಲಾಗಿರುವ ತಡೆಯಾಜ್ಞೆಯನ್ನು ತೆರವು ಮಾಡಿಸಲು ಸರಕಾರ ಕ್ರಮಕೈಗೊಳ್ಳುತ್ತಿಲ್ಲ ಎಂದು ಪತ್ರಕರ್ತರಿಗೆ ಹೇಳಿದರು.

ಬಂಡವಾಳಶಾಹೀ ಜಗತ್ತಿನಲ್ಲಿ ವರ್ಗ ಸಮರಗಳು

ಆರ್ಥಿಕ ಸಂಕಷ್ಟ ಬಂದೊದಗಿದಾಗ ತನ್ನ ಕಾರ್ಮಿಕರ ಮೇಲೆ ಅದರ ಸಂಪೂರ್ಣಭಾರ ಹೊರಿಸಿ ವಿಪ್ಪತ್ತಿನಿಂದಪಾರಾಗಬಯಸುವುದು ಬಂಡವಾಳಶಾಹೀ ವ್ಯವಸ್ಥೆಯ ಸಾಮಾನ್ಯ ಪದ್ಧತಿ. ಮುಂದುವರಿದ ಬಂಡವಾಳಶಾಹೀ ದೇಶಗಳಲ್ಲಿ ಈ ರೀತಿ ಕಾರ್ಮಿಕರ ಜೀವನ ಮಟ್ಟ ಹಾಗೂ ಕೆಲಸದ ಸ್ಥಿತಿಯ ಮೇಲೆ ಹೆಚ್ಚುತ್ತಿರುವ ದಾಳಿಗೆ 1981 ರಲ್ಲಿ ಈ ದೇಶಗಳ ಕಾರ್ಮಿಕ ವರ್ಗದಿಂದ ತೀವ್ರ ಪ್ರತಿಭಟನೆ ವ್ಯಕ್ತಪಟ್ಟಿದೆ. ಮೂರು ಉದಾಹರಣೆಗಳನ್ನು ಇಲ್ಲಿ ಕೊಡಲಾಗಿದೆ.

ಅಮೇರಿಕಾದಲ್ಲಿ

ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಸರಕಾರೀ ಮಾಲೀಕತ್ವದ ವಿಮಾನ ಸಂಚಾರ ಸಂಸ್ಥೆಗಳಲ್ಲಿ ದುಡಿಯುತ್ತಿದ್ದ 15,500 ವಿಮಾನ ಸಂಚಾರ ನಿಯಂತ್ರಕರು 1981ರ ಅಗಸ್ಟ್ 2 ರಂದು ಆರಂಭಿಸಿದ ಮುಷ್ಕರ ಒಂದು ತೀವ್ರ ರಾಷ್ಟ್ರೀಯ ಹೋರಾಟವಾಗಿ ಪರಿಣಮಿಸಿತು. ಆ ದೇಶದ ಎಲ್ಲಾ ರಾಜ್ಯಗಳಲ್ಲಿ ಆಂತರಿಕ ವಿಮಾನ ಸಂಚಾರ ಸುಮಾರಾಗಿ ನಿಂತೇ ಬಿಟ್ಟಿತು. ಈ ಕಾರ್ಮಿಕರು ಸಂಬಳದಲ್ಲಿ ಏರಿಕೆ ಹಾಗೂ ಶ್ರಮಭಾರದಲ್ಲಿ ಕಡಿತವನ್ನು ಕೇಳುತ್ತಿದ್ದರು.

ನ್ಯೂಟ್ರಾನ್ ಬಾಂಬಿಗಾಗಿ ಕೋಟಿಗಟ್ಟಲೆ ಡಾಲರುಗಳನ್ನು ಸುರಿಯಲು ಸದಾ ಹಾತೊರೆಯುತ್ತಿರುವ ರೇಗನ್ ಆಡಳಿತ ತನ್ನ ನೌಕರರ ಈ ನ್ಯಾಯಬದ್ಧ ಬೇಡಿಕೆಗಳನ್ನು ಒಪ್ಪಿಕೊಳ್ಳುವ ಬದಲು ಆ ದೇಶ ಎಂದೂ ಕಂಡಿರದಂತಹ ದಮನ ಕಾರ್ಯಗಳನ್ನು ಆರಂಭಿಸಿತು. ಸುಮಾರಾಗಿ ಎಲ್ಲಾ ಮುಷ್ಕರಕಾರರನ್ನು ವಜಾ ಮಾಡಲಾಯಿತು ಮಾತ್ರವಲ್ಲ ಅವರೆಲ್ಲರನ್ನು ಕಪ್ಪು ಪಟ್ಟಿಯಲ್ಲಿಡಲಾಯಿತು. ಅಂದರೆ ಅವರಿಗೆ ಇನ್ನು ಮುಂದೆ ಸರಕಾರೀ ಸಂಸ್ಥೆಗಳಲ್ಲಿ ಯಾವುದರಲ್ಲಿಯೂ ನೌಕರಿ ಸಿಗುವಂತಿಲ್ಲ. ಕಾರ್ಮಿಕ ಸಂಘಟನೆಯ ಹಲವು ಕಾರ್ಯಕರ್ತರನ್ನು ಬಂಧಿಸಲಾಯ್ತು. ಕಾರ್ಮಿಕ ಸಂಘದ ಬ್ಯಾಂಕ್ ಅಕೌಂಟನ್ನು ಹಾಗೂ ಮುಷ್ಕರ ನಿಧಿಯನ್ನು ಬಲಾತ್ಕಾರವಾಗಿ ಕಿತ್ತುಕೊಳ್ಳಲಾಯಿತು. ಕೊನೆಗೆ ಒಂದು ವಿಶೇಷ ಆಜ್ಞೆಯ ಮೂಲಕ ಈ ಸಂಘಟನೆ ವಿಮಾನ ಸಂಚಾರ ನಿಯಂತ್ರಕರ ಪರವಾಗಿ ಮಾತುಕತೆ ನಡೆಸುವ ಅದರ ಪ್ರಜಾಪ್ರಭುತ್ವ ಹಕ್ಕಿನಿಂದಲೇ ಅದನ್ನು ವಂಚಿಸಲಾಯಿತು. ಮುಷ್ಕರ ವಿಫಲವಾಯಿತು, ನಿಜ. ಆದರೆ ಅದಕ್ಕಾಗಿ ರೇಗನ್ ಆಡಳಿತ ಕೈಗೊಂಡ ರಾಕ್ಷಸೀ ಕ್ರಮಗಳು ರೇಗನ್ ಆಡಳಿತದ ವರ್ಗಸ್ವಭಾವ ಹಾಗೂ ಅಮೇರಿಕಾದ ವ್ಯವಸ್ಥೆ ಎದುರಿಸುತ್ತಿರುವ ಬಿಕ್ಕಟ್ಟಿನ ತೀವ್ರತೆಯ ಸ್ಪಷ್ಟ ಸೂಚಿಯೂ ಹೌದು.

ವ್ಯಾಪಕ ಬೆಂಬಲ

ಇಂತಹ ಕ್ರಮಗಳಿಂದಾಗಿ ಅಮೇರಿಕಾದ ಒಳಗೆ ಹಾಗೂ ಹೊರಗೆ ರೇಗನ್ ಆಡಳಿತದ ವಿರುದ್ಧ ತೀವ್ರ ಪ್ರತಿಭಟನೆ ವ್ಯಕ್ತಪಟ್ಟಿತ್ತು. ವಿಮಾನ ಸಂಚಾರ ನಿಯಂತ್ರಕರ ಮುಷ್ಕರಕ್ಕೆ ಬೆಂಬಲವಾಗಿ ಅಮೇರಿಕಾದಾದ್ಯಂತ ಕಾರ್ಮಿಕರು ಮತ ಪ್ರದರ್ಶನ ನಡೆಸಿದರು. ಅಂತಿಮವಾಗಿ ಇದು ಸೆಪ್ಟಂಬರ್ 19 ರಂದು ಬೃಹತ್ ಸ್ವರೂಪದ 'ವಾಶಿಂಗ್ಟನ್ ಚಲೋ' ಆಗಿ ಅಮೇರಿಕಾದ ಆಳುವ ವೃತ್ತಗಳಿಗೆ ಕಾರ್ಮಿಕ ವರ್ಗದಲ್ಲಿ ಮೂಡಿದ ಹೊಸ ವರ್ಗ ಪ್ರಜ್ಞೆಯನ್ನು ಮನವಂಕೆ ಮಾಡಿಸಿಕೊಟ್ಟಿತು. ಫಲವಾಗಿ ಆ ದೇಶದ ಸುಧಾರಣಾವಾದೀ ಕಾರ್ಮಿಕ ಸಂಘಟನೆಯ ಕೇಂದ್ರವಾದ AFL-CIO ಕೂಡಾ ತನ್ನ ವಾರ್ಷಿಕ ಸಮ್ಮೇಳನಕ್ಕೆ ಸಂಪ್ರದಾಯದಂತೆ ಈ ಬಾರಿ ಅಧ್ಯಕ್ಷ ರೇಗನ್‌ರಿಗೆ ಆಹ್ವಾನ ನೀಡದೆ ತನ್ನ ಪ್ರತಿಭಟನೆ ವ್ಯಕ್ತಪಡಿಸಬೇಕಾಯ್ತು. ದ್ವಿತೀಯ ಮಹಾಯುದ್ಧನಂತರ ಇಂತಹದೊಂದು ಕ್ರಮ ಇದುವರೆಗೆ ಆ ಸಂಘಟನೆ ತಗೊಂಡಿರಲಿಲ್ಲ.

ವಿದೇಶದ ಕಾರ್ಮಿಕ ಸಂಘಟನೆಗಳು ಅಮೇರಿಕಾದ ವಿಮಾನ ಸಂಚಾರಿ ನಿಯಂತ್ರಕರಿಗೆ ಅಪೂರ್ವ ಸೌಹಾರ್ದ ವ್ಯಕ್ತಪಡಿಸಿದವು. ಫ್ರಾನ್ಸಿನ ಮೂರು ಪ್ರಮುಖ ಸಾರಿಗೆ ಕಾರ್ಮಿಕರ ಸಂಘಟನೆಗಳು ಅಮೇರಿಕಾಕ್ಕೆ ಹೋಗುವ ವಿಮಾನಗಳನ್ನು ಬಹಿಷ್ಕರಿಸಿದವು. ಅಮೇರಿಕಾದ ರಾಯಭಾರಿ ಕಚೇರಿಗಳೆದುರು ಪ್ರತಿಭಟನೆಗಳು ನಡೆದವು. ಕಾರ್ಮಿಕ ಸಂಘಗಳ ಜಾಗತಿಕ ಮಹಾಸಂಘ (WFTU) ಇಂತಹ ಪ್ರತಿಭಟನೆಗಳನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರವಹಿಸಿತು.

ಬ್ರಿಟನ್ನಿನಲ್ಲಿ

ರಾಷ್ಟ್ರೀಕೃತ ಸಂಸ್ಥೆಯಾದ ಬ್ರಿಟಿಷ್ ಲೇಲ್ಯಾಂಡ್‌ನ 58,000 ಕಾರ್ಮಿಕರು ನವಂಬರ್ 1 ರಿಂದ 4ರವರೆಗೆ ಮುಷ್ಕರ ನಡೆಸಿದರು. ಈ ಮುಷ್ಕರವೂ ಗುತ್ತೇದಾರಿಗಳ ಹಾಗೂ ಸರಕಾರೀ ನಿಯಂತ್ರಣದ ಪತ್ರಿಕೆಗಳ ಸತತ ಅಪಪ್ರಚಾರದಿಂದಾಗಿ ವಿಫಲಗೊಂಡಿತು.

ಬ್ರಿಟನ್ನಿನಲ್ಲಿ ಸತತವಾಗಿ ಏರುತ್ತಿರುವ ಜೀವನ ವೆಚ್ಚವನ್ನು ಹಾಗೂ ದಿನೇ ದಿನೇ ಕ್ಷೀಣಿಸುತ್ತಿರುವ ಕೊಳ್ಳುವ ಶಕ್ತಿಯನ್ನು ಸರಿಹೊಂದಿಸುವುದಕ್ಕಾಗಿ ಬ್ರಿಟಿಷ್ ಲೇಲ್ಯಾಂಡಿನ ಕಾರ್ಮಿಕರು 20 ಶೇಕಡಾ ವೇತನ ಹೆಚ್ಚಳದ ಕೇಳಿಕೆಯಿಟ್ಟಿದ್ದರು. ಸಂಸ್ಥೆಯ ಆಡಳಿತವರ್ಗ ಕೇವಲ 3.8% ಹೆಚ್ಚಳ ಮಾತ್ರ ಕೊಡುತ್ತೇನೆಂದಿತು. ಇದು ಹಣದುಬ್ಬರದ ಸರಾಸರಿ ವಾರ್ಷಿಕ ಏರಿಕೆಯ ಮೂರರಲ್ಲಿ ಒಂದಂಶದಷ್ಟು ಅಗುವುದಿಲ್ಲ. ಆಡಳಿತವರ್ಗ ಪಟ್ಟು ಹಿಡಿದು ಕೂತಾಗ ಕಾರ್ಮಿಕರು ಉಪಾಯವಿಲ್ಲದೆ ಸಂಸ್ಥೆಯ ಕಾರ್ಖಾನೆಗಳ ಪ್ರಮುಖ ದ್ವಾರಗಳಲ್ಲಿ ತಡೆಯೊಡ್ಡಿದರು. ಎಲ್ಲಾ ಕಾರ್ಮಿಕರನ್ನೂ ವಜಾ ಮಾಡುವುದಾಗಿ ಆಡಳಿತವರ್ಗ ಬೆದರಿಸಿತು. ಆಡಳಿತವರ್ಗ, ಗುತ್ತೇದಾರಿ ಸಂಸ್ಥೆಗಳು ಹಾಗೂ ಸರಕಾರಿ ನಿಯಂತ್ರಣದ ಪತ್ರಿಕೆಗಳು ಸತತ ಅಪಪ್ರಚಾರ ನಡೆಸಿ ಮುಷ್ಕರಕಾರರ ಮೇಲೆ ಮಾನಸಿಕ ಒತ್ತಡ ಹೇರಿದರು. ಅಂತಿಮವಾಗಿ ಯೂನಿಯನ್ ಹಿಂದೆ ಸರಿಯಬೇಕಾಯ್ತು. ಆದರೂ ಇತ್ತೀಚಿನ ವರ್ಷಗಳಲ್ಲಿ ಬ್ರಿಟನ್ನಿನ ವಾಹನ ಕೈಗಾರಿಕೆಯ ಕಾರ್ಮಿಕರು ನಡೆಸಿದ ದೊಡ್ಡ ಮುಷ್ಕರಗಳಲ್ಲಿ ಇದೊಂದು ಎಂದು ಇದನ್ನು ಪರಿಗಣಿಸಲಾಗುತ್ತಿದೆ.

ಫ್ರಾನ್ಸಿನಲ್ಲಿ

ಫ್ರಾನ್ಸಿನ ರಾಷ್ಟ್ರೀಕೃತ ಬೃಹತ್ ವಾಹನ ಉದ್ಯಮ ಸಂಸ್ಥೆಯಾದ ರೆನಾಲ್ಟ್‌ನಲ್ಲಿ ಕುಶಲ ಕಾರ್ಮಿಕರು ಏರುತ್ತಿರುವ ಜೀವನ ವೆಚ್ಚ ಹಾಗೂ ಹಣದುಬ್ಬರದಿಂದ ತೀವ್ರತೊಂದರೆಗೊಳಪಟ್ಟಿದ್ದು ಸೆಪ್ಟೆಂಬರ್ ತಿಂಗಳಲ್ಲಿ ಹಲವು ಸಣ್ಣ ಮುಷ್ಕರಗಳನ್ನು ನಡೆಸಿದ್ದರು. ಸಮಾಜವಾದಿಗಳು ಅಧಿಕಾರಕ್ಕೆ ಬಂದ ಮೇಲೆ ಇದು ಒಂದು ದೊಡ್ಡ ಸಾಮಾಜಿಕ ಹೋರಾಟದ ರೂಪ ತಳೆಯಿತು. ಉದ್ಯಮದ ಆಡಳಿತವರ್ಗ ಅಕ್ಟೋಬರ್‌ನಲ್ಲಿ ಲಾಕೌಟ್ ಘೋಷಿಸಿ 13,000 ಕಾರ್ಮಿಕರಲ್ಲಿ 4000 ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿತು. ಆದರೆ ಕಾರ್ಮಿಕರು ಇದರಿಂದ ಭಯಭೀತರಾಗುವ ಬದಲು ಅವರ ಐಕ್ಯತೆ ಇನ್ನಷ್ಟು ಹೆಚ್ಚಿತು. ಖಾಸಗೀ ವಾಹನ ಉದ್ಯಮ ಸಂಸ್ಥೆಯಾದ ಪ್ಯೂಗೋಟ್‌ನ 5000 ಕಾರ್ಮಿಕರು ರೆನಾಲ್ಟ್ ಕಾರ್ಮಿಕರಿಗೆ ಬೆಂಬಲವಾಗಿ ಮುಷ್ಕರ ನಡೆಸಿದರು. 1968ರ ಪ್ರಖ್ಯಾತ 'ಕೆಂಪು ಮೇ' ನಂತರ ಅತೀ ದೊಡ್ಡ ಪ್ರಮಾಣದ ಹೋರಾಟವನ್ನು ಫ್ರಾನ್ಸ್‌ನ ವಾಹನ ಉದ್ಯಮ ಕಂಡಿತು. ಫಲವಾಗಿ ಕಾರ್ಮಿಕರ ಹೆಚ್ಚಿನ ಬೇಡಿಕೆಗಳು ಈಡೇರಿದವು. ಕಾರ್ಮಿಕರ ಸಂಬಳವೂ ಹೆಚ್ಚಿತು, ಕಾರ್ಮಿಕರ ಸಂಖ್ಯೆಯೂ ಏರಿತು.

1982ರಲ್ಲಿ ಮುಂದುವರಿದ ಬಂಡವಾಳಶಾಹೀ ದೇಶಗಳಲ್ಲಿ ಈ ರೀತಿಯ ವರ್ಗ ಸಮರಗಳು ಇನ್ನಷ್ಟು ಹೆಚ್ಚುವ, ತೀವ್ರಗೊಳ್ಳುವ ಸಂಭವವಿದೆ. ಯಾಕೆಂದರೆ ಇದುವರೆಗೆ ಬಿಕ್ಕಟ್ಟು ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಕಾಲಕಾಲಕ್ಕೆ ತಲೆದೋರಿ ಹೇಗೋ ಒಂದು ರೀತಿಯಲ್ಲಿ ಪರಿಹಾರವಾಗುತ್ತಿತ್ತು. ಆದರೆ ಈಗ ಇಂತಹ ಬಂಡವಾಳಶಾಹೀ ಬಿಕ್ಕಟ್ಟು ಸರ್ವವ್ಯಾಪಿಯಾಗುತ್ತಿದೆ. ಸಾರ್ವತ್ರಿಕ ಸ್ವರೂಪ ಪಡೆದು ದಿನೇ ದಿನೇ ಉಲ್ಬಣಗೊಳ್ಳುತ್ತಿದೆ. ಇಂತಹ ಬಿಕ್ಕಟ್ಟಿನ ಸಮಸ್ಯೆಗಳ ಹೊರೆಯನ್ನು ಕಾರ್ಮಿಕ ವರ್ಗದ ತಲೆಮೇಲೆ ಹೇರಿ ತಾತ್ಕಾಲಿಕ ಪರಿಹಾರ ಕಂಡುಕೊಳ್ಳುವುದಷ್ಟೆ ಬಂಡವಾಳಶಾಹೀಗಳಿಗೆ ತಿಳಿದಿರುವ ಏಕೈಕ ಮಾರ್ಗ. ಇದಕ್ಕೆ ಪ್ರತಿಯಾಗಿ ಮುಂದುವರಿದ ಬಂಡವಾಳಶಾಹೀ ದೇಶಗಳ ಕಾರ್ಮಿಕರಲ್ಲಿ ತಮ್ಮ ನಿಜವಾದ ಶತ್ರುವಿನ ಬಗ್ಗೆ ಉಂಟಾಗಿರುವ ಅರಿವು, ಆ ಶತ್ರುವಿನ ವಿರುದ್ಧ ಸಂಯುಕ್ತವಾಗಿ ಹೋರಾಡಬೇಕೆಂಬ ಪ್ರಜ್ಞೆ ಹಾಗೂ ಕಾರ್ಮಿಕರ ಹೋರಾಟಗಳಿಗೆ ಅಂತರಾಷ್ಟ್ರೀಯ ಸೌಹಾರ್ದ ಹೆಚ್ಚೆಚ್ಚು ವ್ಯಕ್ತಪಡುತ್ತಿದೆ.

●

ತುರ್ತು ಪರಿಹಾರ ನೀಡಲು ಸಿ. ಪಿ. ಐ. (ಎಂ) ದ. ಕ. ಜಿಲ್ಲಾ ಸಮಿತಿಯ ಒತ್ತಾಯ

ದ. ಕ. ಜಿಲ್ಲೆಯ ಉಡುಪಿಯಲ್ಲಿ ಭೀಕರ ಮಳೆಯಿಂದಾಗಿ ಭಾರೀ ಅನಾಹುತವಾಗಿದ್ದು ಹಲವಾರು ಮನೆಗಳೂ, ಹಲವರ ಪ್ರಾಣ ಹಾನಿಯೂ ಆದ ಘಟನೆಯು ಪ್ರತಿಯೊಬ್ಬರ ಮನ ಕಲಕುವಂತಾದ್ದು. ಆಸ್ತಿ ಪಾಸ್ತಿ, ಮನೆ ಮಾರು ಕಳೆದುಕೊಂಡು ನಿರ್ಗತಿಕರಾದ ಕುಟುಂಬಗಳಿಗೆ ಸರಕಾರ ಈ ಬಗ್ಗೆ ತುರ್ತು ಕ್ರಮ ವಹಿಸಿ ಅವರಿಗೆ ಕೂಡಲೇ ಪುನರ್ವಸತಿ ಹಾಗೂ ಯೋಗ್ಯ ಪರಿಹಾರ ನೀಡಬೇಕೆಂದೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ। ಕೆ. ಆರ್. ಶ್ರೀಯಾನರು ಸರಕಾರವನ್ನು ಒತ್ತಾಯಿಸಿದ್ದಾರೆ.

ಈಗ ತಾನೆ ಮಳೆಗಾಲ ಆರಂಭವಾಗಿದ್ದು ಇನ್ನು 3-4 ತಿಂಗಳು ಮಳೆಗಾಲವಿರುವುದರಿಂದ ಸರಕಾರ ಕಣ್ಣುಮುಚ್ಚಾಲೆಯಾಟ ಆಡದೆ ಇದನ್ನು ಪ್ರಥಮ ಕರ್ತವ್ಯವೆಂದು ಸ್ವೀಕರಿಸಿ, ನಿರ್ಗತಿಕರ ಪುನರ್ವ್ಯವಸ್ಥೆಗೆ ಆದ್ಯ ಗಮನ ಕೊಡಬೇಕೆಂದೂ ಅವರು ವಿನಂತಿಸಿದ್ದಾರೆ.

○

ಬಂಗಾರುಪೇಟೆ :

ಡಿ. ವೈ. ಎಫ್. ಐ. ನೇತೃತ್ವದಲ್ಲಿ ವಾಲಿಬಾಲ್ ಪಂದ್ಯಾವಳಿ

9-6-82 ರಂದು ಡಿ ವೈ ಎಫ್.ಐ. ಬಂಗಾರುಪೇಟೆ ಘಟಕದ ಪ್ರಥಮ ವರ್ಷದ ಸಮಾರಂಭದ ಅಂಗವಾಗಿ ಒಂದು ದಿನದ ಜಿಲ್ಲಾ ಮಟ್ಟದ ವಾಲಿಬಾಲ್ ಪಂದ್ಯಾವಳಿಯನ್ನು ನಡೆಸಲಾಯಿತು.

ಪಂದ್ಯಾವಳಿಯನ್ನು ಸ್ಥಳೀಯ ಪೋಲಿಸ್ ಸರ್ಕಲ್ ಇನ್‌ಸ್ಪೆಕ್ಟರರಾದ ಶ್ರೀ ಕೆ. ಲಕ್ಷ್ಮಣರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಡಿ.ವೈ. ಎಫ್.ಐ. ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಕಾಂ। ಜಿ. ವಿ. ಶ್ರೀರಾಮ ರೆಡ್ಡಿ ಮತ್ತು ಕೋಲಾರ ಜಿಲ್ಲಾ ವಾಲಿಬಾಲ್ ಅಸೋಶಿಯೇಷನ್‌ನ ಗೌರವ ಪ್ರಧಾನ ಕಾರ್ಯದರ್ಶಿ ಶ್ರೀ ಬಿ. ಲಕ್ಷ್ಮಣ ಅವರುಗಳು ಆಗಮಿಸಿದ್ದರು.

ಅಂತಿಮ ಹಂತದಲ್ಲಿ ಕೋಲಾರದ ರೈಸಿಂಗ್ ಸನ್ ತಂಡದವರು ಬಂಗಾರಪೇಟೆಯ ಪದ್ಮ ಕ್ರೀಡಾ ಸಂಘವನ್ನು ಸೋಲಿಸಿ ಪ್ರಥಮ ಸ್ಥಾನವನ್ನು ಗಳಿಸಿದರು.

ಸಾಯಂಕಾಲ 7 ಘಂಟೆಗೆ ನಡೆದ ಬಹಿರಂಗ ಸಭೆಯಲ್ಲಿ ವಿಜೇತರಿಗೆ ಷೀಲ್ಡನ್ನು ಬಹುಮಾನವಾಗಿ ಕೊಡಲಾಯಿತು. ಬಹುಮಾನ ವಿತರಣೆ ಪುರಸಭಾ ಅಧ್ಯಕ್ಷರಾದ ಶ್ರೀ ಪಾರ್ಥಸಾರಥಿಯವರಿಂದ ನಡೆಯಿತು.

●

ಕಾಂ| ದಿಮಿತ್ರೋವ್ ಜನ್ಮಶತಾಬ್ಧಿ ಆಚರಣೆ

ಬೆಂಗಳೂರು :

ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ನೀಡಿದ ಕರೆಯಂತೆ 18-6-82 ರಂದು ಅಂತರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ಮಹಾ ನಾಯಕ ಕಾಂ| ದಿಮಿತ್ರೋವ್ ಅವರ ಜನ್ಮಶತಾಬ್ಧಿಯನ್ನು ಆಚರಿಸಲಾಯಿತು. ಬೆಂಗಳೂರು ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಈ ಸಮಾರಂಭವು ನಡೆಯಿತು.

ನೆರೆದಿದ್ದ ಸಂಗಾತಿಗಳನ್ನುದ್ದೇಶಿಸಿ ಸಿ. ಪಿ. ಐ. (ಎಂ) ರಾಜ್ಯ ಸೆಕ್ರೇಟಾರಿಯೇಟ್ ಸದಸ್ಯರಾದ ಕಾಂ| ಎನ್. ಎಲ್. ಉಪಾಧ್ಯಾಯ ಮತ್ತು ಕಾಂ| ವಿ. ಜೆ. ಕೆ. ನಾಯರ್ ಅವರುಗಳು ಮಾತನಾಡಿ, ಜಾಗತಿಕ ಕಮ್ಯೂನಿಸ್ಟ್ ಚಳುವಳಿಯಲ್ಲಿ ಕಾಂ| ದಿಮಿತ್ರೋವ್ ನಿರ್ವಹಿಸಿದ ಪಾತ್ರದ ಕುರಿತು ತಿಳಿಸಿದರು.

ಮೈಸೂರು :

ಮೈಸೂರಿನ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಛೇರಿಯಲ್ಲಿ 18-6-82 ರಂದು ಅಂತರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ನೇತಾರ ಹಾಗೂ ಬಲ್ಗೇರಿಯಾ ಕಮ್ಯೂನಿಸ್ಟ್ ಪಾರ್ಟಿಯ ಮುಖಂಡರಾಗಿದ್ದ ಕಾಂ| ಜಾರ್ಜಿ ದಿಮಿತ್ರೋವ್‌ರವರ ಜನ್ಮಶತಾಬ್ದಿಯನ್ನು ಪಕ್ಷದ ಸದಸ್ಯರು ಮತ್ತು ಹಿತೈಷಿಗಳು ಹಾಜರಿದ್ದ ಸರಳ ಸಮಾರಂಭದಲ್ಲಿ ಆಚರಿಸಲಾಯಿತು.

ಪಕ್ಷದ ಪ್ರಾದೇಶಿಕ ಸಮಿತಿ ಕಾರ್ಯದರ್ಶಿ ಕಾಂ| ಎಂ. ಎನ್. ಉಗ್ರಪ್ಪನವರು ಕಾಂ| ದಿಮಿತ್ರೋವ್ ರವರ ಹೋರಾಟಮಯ ಜೀವನದ ಪರಿಚಯವನ್ನು ಸಭೆಗೆ ಮಾಡಿ ಕಾಂ| ದಿಮಿತ್ರೋವ್‌ರವರು ಫ್ಯಾಸಿಸಂ ಅಪಾಯದ ಬಗ್ಗೆ ನೀಡಿದ ಎಚ್ಚರಿಕೆಯನ್ನು ಎಂದೂ ಮರೆಯಲು ಸಾಧ್ಯವಿಲ್ಲವೆಂದರು.

ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಮುಖಂಡರಾದ ಕಾಂ| ಸೂರ್ಯನಾರಾಯಣರಾವ್‌ರವರು ಕಾಂ| ದಿಮಿತ್ರೋವ್‌ರ ಜೀವನ ಕ್ರಾಂತಿಕಾರಿಗಳಿಗೆ ಸ್ಫೂರ್ತಿದಾಯಕವಾಗಿದ್ದು ಇವರ ಜೀವನ ಕಥೆ, ಹೋರಾಟಗಳ ಬಗ್ಗೆ ಪುಸ್ತಕಗಳು ಕನ್ನಡದಲ್ಲಿ ಮುದ್ರಣವಾದರೆ ಜನಸಾಮಾನ್ಯರಿಗೆ ಸಹಾಯಕವಾಗಬಲ್ಲದೆಂದು ಹೇಳಿದರು.

ಶಿವಮೊಗ್ಗ :

ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಮಹಾನಾಯಕರೂ ಬಲ್ಗೇರಿಯಾ ಕಮ್ಯುನಿಸ್ಟ್ ಪಾರ್ಟಿಯ ಮುಂಖರು, ಸೈದ್ಧಾಂತಿಗಳು, ಹೋರಾಟಗಾರರು ಆಗಿದ್ದ ಕಾಂ| ದಿಮಿತ್ರೋವ್ ರವರ ಬಗ್ಗೆ ಕಾಂ| ಡಾ|| ಕೃಷ್ಣಾಜೀಯವರು ಮಾತನಾಡಿ ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯು ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯಾಗಿದ್ದು ಇಂದು ಈ ನಮ್ಮ ದೇಶದಲ್ಲೂ ಸಾಮ್ರಾಜ್ಯಶಾಹಿ ನೀತಿ ಬೇರು ಬಿಡುತ್ತಿದ್ದು, ಇದರ ವಿರುದ್ಧ ಹೋರಾಡಲು ಈ ದಿನವು ಕಮ್ಯುನಿಸ್ಟ್ ಚಳುವಳಿಗೆ ಸ್ಫೂರ್ತಿ ನೀಡುವುದೆಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ಕಾಂ| ಚಂದೂಕುಟ್ಟಿಯವರು ವಹಿಸಿದ್ದರು.

●

ಸ್ಪಷ್ಟೀಕರಣ

ಜೂನ್ 6ರ 'ಐಕ್ಯರಂಗ' ಸಂಚಿಕೆಯಲ್ಲಿ ಪ್ರಕಟವಾದ 'ಓ! ನನ್ನ ಕಾಮ್ರೇಡುಗಳೇ' ಕವನದ ಕೊನೆಯ ನಾಲ್ಕು ಸಾಲುಗಳು ಕೆಲವು ಸಂಗಾತಿಗಳಲ್ಲಿ ಸೃಷ್ಟಿಸಿರುವ ಸಂದೇಹಗಳಿಗೆ ಈ ಸ್ಪಷ್ಟೀಕರಣ.

ಇತಿಹಾಸಕ್ಕೆ ಸಾವಿಲ್ಲ ಎನ್ನುವುದು ಎಲ್ಲರೂ ಒಪ್ಪುವ ಸತ್ಯ. ಅದೇ ರೀತಿ ಇತಿಹಾಸದೊಂದಿಗೆ ಬದುಕುವ, ಬದಲಾವಣೆಗಾಗಿ ಹೋರಾಡುವ ಜನರಿಗೂ ಸಾವಿಲ್ಲ ಎನ್ನುವುದು ಆ ಸಾಲುಗಳ ಹಿಂದಿನ ನನ್ನ ಭಾವನೆ. ಇಲ್ಲಿ 'ಕಾಮ್ರೇಡ್' ಪದವು ಯಾವುದೇ ಒಬ್ಬ ವ್ಯಕ್ತಿಗೆ ಅನ್ವಯಿಸಿಲ್ಲ ಅಥವಾ ಯಾವುದೇ ಒಂದು ನಿರ್ದಿಷ್ಟ ರಾಜಕೀಯ ಪಕ್ಷದ ಕಾರ್ಯಕರ್ತರಿಗಾಗಲೀ ಸೀಮಿತಗೊಳಿಸದೆ ವಿಶಾಲಾರ್ಥದಲ್ಲಿ ಬಳಸಲಾಗಿದೆ.

ಬದಲಾವಣೆ ಅನಿವಾರ್ಯ ಮತ್ತು ನಿರಂತರ ಎಂಬುದರ ಆಧಾರದ ಮೇಲೆ ಚರಿತ್ರೆ ಮತ್ತು ಬದಲಾವಣೆಗಾಗಿ ಹೋರಾಡುವ ವರ್ಗ ಎರಡೂ ಅವಿಭಾಜ್ಯವೆಂಬುದನ್ನು ಹೇಳುವುದೇ ನನ್ನ ಉದ್ದೇಶವಾಗಿದೆ.

ಚರಿತ್ರೆಗೆ ಚಾಲನೆ ನೀಡುವ ಕ್ರಾಂತಿಕಾರೀ ವರ್ಗ ಚರಿತ್ರೆಯುದ್ದಕ್ಕೂ ಆಯಾ ಸಾಮಾಜಿಕ-ಆರ್ಥಿಕ ಸಂಧರ್ಭಗಳಿಗನುಸಾರವಾಗಿ ಅಸ್ತಿತ್ವದಲ್ಲಿದ್ದೇ ಇರುತ್ತದೆ ಎಂಬ ನನ್ನ ನಂಬಿಕೆಯೂ ಆ ಸಾಲುಗಳ ಹಿಂದಿನ ಪ್ರೇರಣೆಯಾಗಿದೆ.

—ಉದಯ

●

ಬೆಂಗಳೂರು

ದೌರ್ಜನ್ಯವೆಸಗಿದ ಪೋಲಿಸರ ವಜಾಕ್ಕೆ

ಸಿ. ಐ. ಟಿ. ಯು. ಒತ್ತಾಯ

ಮೈಸೂರು ವೈರ್ ಆ್ಯಂಡ್ ಮೆಟಲ್ಸ್ ಎಂಬ ಕಾರ್ಖಾನೆ ಪೀಣ್ಯ ವಿಭಾಗದಲ್ಲಿದೆ. ಸುಮಾರು 400 ಕಾರ್ಮಿಕರು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಹಿಂದೆ ಕಾನೂನಿನನ್ವಯ ಆಡಳಿತ ವರ್ಗದೊಟ್ಟಿಗೆ ಮಾಡಿಕೊಳ್ಳಲಾದ ಎರಡು ಒಪ್ಪಂದಗಳನ್ನು ಜಾರಿಗೊಳಿಸದೆ, ಈ ಕುರಿತು ಒತ್ತಾಯಿಸಿದ್ದಕ್ಕಾಗಿ ಸಂಘದ ಸಕ್ರೀಯ ನಾಲ್ವರು ಕಾರ್ಯಕರ್ತರನ್ನು ವಜಾ ಮಾಡಿದ್ದೇ ಅಲ್ಲದೇ 6 ಜನರನ್ನು ಸಸ್ಪೆಂಡ್ ಮಾಡಲಾಗಿಯಿತು. ಆಡಳಿತ ವರ್ಗದ ಅನ್ಯಾಯದ ಕ್ರಮವನ್ನು ಪ್ರತಿಭಟಿಸಿ ಕಾರ್ಮಿಕರು ಸುಮಾರು 90 ದಿನಗಳಿಂದ ಮುಷ್ಕರದಲ್ಲಿದ್ದರು. (ಕಾರ್ಮಿಕ ಸಂಘ ಎ.ಐ.ಟಿ.ಯು ಸಿ. ನೇತೃತ್ವದಲ್ಲಿದೆ.)

ಕಾರ್ಮಿಕರ ಮುಷ್ಕರ ಎಲ್ಲಿ ನಡೆಯುತ್ತದೆಯೋ ಅಲ್ಲಿ ನಿಜಾಮುದ್ದೀನನ ಭಂಟರು ಹಾಜರು. ಆಡಳಿತ ವರ್ಗದೊಟ್ಟಿಗೆ ಶಾಮೀಲಾಗಿ ಕಾರ್ಮಿಕರನ್ನು ಕ್ರೂರವಾಗಿ ಹಿಂಸಿಸುವುದು ಹೊಸದೇನಲ್ಲ. ಕೆಲವೇ ದಿನಗಳ ಮೊದಲು ವೈಟ್‌ಫೀಲ್ಡ್ ವಿಭಾಗದಲ್ಲಿ ಇದೇ ರೀತಿ ನಡೆದಿತ್ತು. ಅದೇ ರೀತಿ ಇಲ್ಲಿಯೂ ಸಂಘದ ಪದಾಧಿಕಾರಿಗಳನ್ನು ಅಕ್ರಮ ಬಂಧನದಲ್ಲಿಟ್ಟು ಚಿತ್ರಹಿಂಸೆ (ಯಶವಂತಪುರ ಠಾಣೆ) ನೀಡಲಾಗಿತ್ತು. ಕೋರ್ಟಿಗೂ ಹಾಜರುಪಡಿಸಿರಲಿಲ್ಲ. ಸುದ್ದಿ ತಿಳಿದೊಡನೆ ಎ.ಐ.ಟಿ.ಯು.ಸಿ.ಗೆ ಸೇರಿದ ಸಾವಿರಾರು ಕಾರ್ಮಿಕರು ಕಾಂ| ಬಾಬೂಮ್ಯಾಥ್ಯೂ ಅವರ ನೇತೃತ್ವದಲ್ಲಿ ಮೆರವಣಿಗೆ ಹೊರಟು ಪೋಲಿಸ್ ದೌರ್ಜನ್ಯವನ್ನು ಪ್ರತಿಭಟಿಸುವ ಕಾರ್ಯಕ್ರಮ ಹಾಕಿಕೊಂಡಿದ್ದರು.

ಮೆರವಣಿಗೆ ಜಾಲಹಳ್ಳಿ ಕ್ರಾಸ್ ಹತ್ತಿರ ಬಂದಾಗ ನೂರಾರು ಸಂಖ್ಯೆಯಲ್ಲಿ ಪೋಲಿಸ್ ಪಡೆ ಆಗಮಿಸಿ ಮೆರವಣಿಗೆಕಾರರ ಮೇಲೆ ಆಕ್ರಮಣವೆಸಗಿತು. ಲಾಠೀ ಪ್ರಹಾರ-ಅಶ್ರುವಾಯು ಪ್ರಯೋಗ ನಡೆಯಿತು. ಪೋಲಿಸರ ಈ ಕಾರ್ಯಾಚರಣೆಯಲ್ಲಿ ನೂರಾರು ಜನ ಗಾಯಗೊಂಡರು. ಸುಶೀಲಾ ಎಂಬ ಮಹಿಳಾ ಕಾರ್ಮಿಕಳೊಬ್ಬಳಿಗೆ ಉಸಿರಾಟಕ್ಕೂ ತೊಂದರೆಯಾಗಿ ಆಸ್ಪತ್ರೆಗೆ ಸೇರಿಸಲಾಗಿದೆ. ಇದು ಸಾಲದೆಂಬಂತೆ ಕಾರ್ಮಿಕರ ವಾಚು, ಪರ್ಸು, ಸೈಕಲ್ ಇತ್ಯಾದಿಗಳನ್ನು ಕೊಂಡೊಯ್ಯಲಾಯಿತು.

ತಮ್ಮ ಕಾರ್ಯಾಚರಣೆಯ ಕೊನೆಯ ಹಂತವಾಗಿ ಮೆರವಣಿಗೆಯ ನೇತೃತ್ವವನ್ನು ವಹಿಸಿದ್ದ ಕಾಂ| ಬಾಬೂ ಅವರನ್ನು ವ್ಯಾನ್‌ನಲ್ಲಿ ಕೊಂಡೊಯ್ದು ತೀವ್ರವಾಗಿ (ಸುಮಾರು 40 ನಿಮಿಷ) ಥಳಿಸಲಾಯಿತು. ಪತ್ರಿಕಾಗೋಷ್ಠಿಯಲ್ಲಿ ತಮಗಾದ ಗಾಯಗಳನ್ನು ಕಾಂ| ಬಾಬೂ ಪ್ರದರ್ಶಿಸಿದಾಗ ಇನ್ನೂ ಲಾಠೀ ಗುರುತು ಅಚ್ಚೊತ್ತಿದ್ದವು.

ನಗರದಲ್ಲಿ ಸೆ. 35 ಜಾರಿಯಲ್ಲಿ ಇದೆಯೆಂದೂ, ಕಾರಣ ಕಾರ್ಮಿಕರನ್ನು ಚದುರಿಸಲಾಯಿತೆಂದೂ ಪೋಲಿಸರ ಅಂಬೋಣ. ಆದರೆ ಜೂನ್ 17 ರಂದು ನಗರದಲ್ಲಿ ಸೆ. 35 ಜ್ಯಾರಿಯಲ್ಲಿರಲಿಲ್ಲ.

ಈ ಅಮಾನುಷ ದೌರ್ಜನ್ಯವನ್ನು ಸಿ. ಐ. ಟಿ. ಯು. ಬೆಂಗಳೂರು ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸಿದೆ. ಕಾರ್ಮಿಕರನ್ನು ಅಮಾನುಷವಾಗಿ ನಡೆಸಿಕೊಳ್ಳುವ ತನ್ನ ಇಲಾಖೆಯ ವ್ಯಕ್ತಿಗಳನ್ನು ಕಮೀಷನರ್ ಪ್ರೋತ್ಸಾಹಿಸುತ್ತಿದ್ದಾರೆ ಎಂದು ಸಿ.ಐ.ಟಿ.ಯು. ಆಪಾದಿಸಿದೆ.

ಘಟನೆಗೆ ಕಾರಣಕರ್ತರಾದ ಎ. ಪಿ. ಅಹ್ಮದ್ ಅಲಿ ಮತ್ತು ಸರ್ಕಲ್ ಇನ್‌ಸ್ಪೆಕ್ಟರ್ ಉಲ್ಲಾಸ್ ಇವರೀರ್ವರನ್ನೂ ತಕ್ಷಣ ಸಸ್ಪೆಂಡ್ ಮಾಡಬೇಕೆಂದು ಸಿ.ಐ.ಟಿ.ಯು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂ| ಅನಂತ್ ರಾಂ ಒತ್ತಾಯಿಸಿದ್ದಾರೆ.

●

> **ಬೆಂಗಳೂರಿನಲ್ಲಿ**
>
> **ಸಿ.ಐ.ಟಿ.ಯು. ವರ್ಕಿಂಗ್ ಕಮಿಟಿ ಸಭೆ**
>
> ಸಿ. ಐ. ಟಿ ಯು ವರ್ಕಿಂಗ್ ಕಮಿಟಿಯ ಸಭೆಯು ಜುಲೈ 23 ರಿಂದ 25ರವರೆಗೆ ಬೆಂಗಳೂರಿನಲ್ಲಿ ನಡೆಯಲಿದೆ. ಸಭೆ 23ರ ಬೆಳಿಗ್ಗೆ 9 ಘಂಟೆಗೆ ಆರಂಭವಾಗಲಿರುವದು
>
> ಸಿ. ಐ ಟಿ. ಯು. ಅಧ್ಯಕ್ಷ ಕಾಂ| ಬಿ.ಟಿ. ರಣದಿವೆಯವರು ಸಭೆಯ ಅಧ್ಯಕ್ಷತೆ ವಹಿಸಲಿರುವರು.
>
> ಸಭೆಯು ಇತ್ತೀಚಿನ ಸಿ.ಐ ಟಿ.ಯು. ಚಟುವಟಿಕೆಗಳನ್ನು, ದೇಶದ ಪ್ರಸಕ್ತ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕಾರ್ಮಿಕ ವರ್ಗದ ಜಂಟಿ ಕಾರ್ಯಚರಣೆಯ ಕುರಿತು ಚರ್ಚಿಸಲಿದೆ.

ಕಪ್ಪು ಮಸೂದೆಗಳ ವಿರುದ್ಧ ಚಳುವಳಿಗೆ ಕರೆ

ಕಳೆದ ಸಂಸತ್ ಅಧಿವೇಶನ ಕೊನೆಗೊಳ್ಳುವ ಸಮಯದಲ್ಲಿ ಕೇಂದ್ರ ಕಾರ್ಮಿಕ ಸಚಿವ ಭಗವತ್ ಝಾ ಆಝಾದ್ ಅವರು ಟ್ರೇಡ್ ಯೂನಿಯನ್ ತಿದ್ದುಪಡಿ ಮಸೂದೆ, ಕೈಗಾರಿಕಾ ವಿವಾದಗಳ ತಿದ್ದುಪಡಿ ಮಸೂದೆ, ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದ ಮಸೂದೆಗಳನ್ನು ಸಂಸತ್ ಸದನಗಳ ಮುಂದೆ ಮಂಡಿಸಿದರು. ವಿರೋಧ ಪಕ್ಷಗಳು ಈ ಮಸೂದೆಗಳ ಮಂಡನೆಯನ್ನು ಉಗ್ರವಾಗಿ ವಿರೋಧಿಸಿದರು.

ಜೂನ್ ನಾಲ್ಕರಂದು ನವದೆಹಲಿಯಲ್ಲಿ ಸಭೆ ಸೇರಿದ್ದ ಕಾರ್ಮಿಕ ಸಂಘಗಳ ರಾಷ್ಟ್ರೀಯ ಚಳವಳಿ ಸಮಿತಿ (ಎನ್.ಸಿ.ಸಿ.) ಯು ಈ ಮಸೂದೆಗಳನ್ನು ಕಾರ್ಮಿಕ ಸಂಘಗಳು ಪ್ರಾರಂಭವಾದಂದಿನಿಂದ ಕಾರ್ಮಿಕರು ಹೋರಾಟಗಳ ಮುಖಾಂತರಪಡೆದುಕೊಂಡು ಬಂದಿರುವ ಹಕ್ಕುಗಳನ್ನು ದಮನಮಾಡಿ, ನಮ್ಮ ದೇಶದ ನೈಜ ಟ್ರೇಡ್ ಯೂನಿಯನ್ ಚಳುವಳಿಯನ್ನು ನಾಶಗೊಳಿಸುವುದೇ ಈ ಮಸೂದೆಗಳ ಉದ್ದೇಶವಾಗಿದೆಯೆಂದು ಬಣ್ಣಿಸಿ, ಲೋಕ ಸಭೆಯು ಪ್ರಾರಂಭವಾಗುವ ದಿನದಂದು ರಾಷ್ಟ್ರದ್ಯಂತ, ರಾಜ್ಯಗಳ ರಾಜಧಾನಿಗಳಲ್ಲಿ ಮತ್ತು ಕೈಗಾರಿಕಾ ಕೇಂದ್ರಗಳಲ್ಲಿ ಕಾರ್ಮಿಕರು ಈ ಮಸೂದೆಗಳನ್ನು ವಿರೋಧಿಸಲು ಆ ದಿನವನ್ನು "ಕಪ್ಪು ಕಾರ್ಮಿಕ ಮಸೂದೆಗಳ ವಿರೋಧಿ ದಿನ" ವನ್ನಾಗಿ ಆಚರಿಸಬೇಕೆಂದು ಕರೆ ಕೊಟ್ಟಿದೆ. ಅಂದು ಕಾರ್ಮಿಕರು ಈ ದಿನಾಚರಣೆಯ ಅಂಗವಾಗಿ ಪ್ರದರ್ಶನ, ಮೆರವಣಿಗೆ, ಬಹಿರಂಗ ಸಭೆಗಳನ್ನು ನಡೆಸಬೇಕೆಂದು ಕರೆಕೊಡಲಾಗಿದೆ.

ಈ ಚಳುವಳಿಯ ಕಾರ್ಯಕ್ರಮವನ್ನು ಕರ್ನಾಟಕದಾದ್ಯಂತ ಯಶಸ್ವಿಗೊಳಿಸಬೇಕೆಂದು ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿಗಳು ಕರೆ ಕೊಟ್ಟಿರುತ್ತಾರೆ.

ನಮಗೆ ತಿಳಿದು ಬಂದಿರುವ ವರದಿಗಳ ಪ್ರಕಾರ ಲೋಕ ಸಭೆಯ ಮುಂಗಾರು ಅಧಿವೇಶನ ಜುಲೈ 8 ರಂದು ಪ್ರಾರಂಭವಾಗುತ್ತಿವೆ. ಅಂದು ಈ ದಿನವನ್ನು ಆಚರಿಸಬೇಕಾಗಿದೆ. ●

ಪ್ರಾವಿಡೆಂಟ್ ಫಂಡ್ ಸ್ಕೀಂ ಜಾರಿ

(1ನೇ ಪುಟದಿಂದ)

ಜೂನ್ 21ರ ಸಭೆಯಲ್ಲಿ ಬೀಡಿ ಮಾಲೀಕರು ತಾ|| 1-8-78 ರಿಂದ ತನ್ನ ಕಾರ್ಮಿಕರಿಗೆ ಪ್ರಾವಿಡೆಂಟ್ ಫಂಡ್ ಸೌಲಭ್ಯವನ್ನು ತಾವಾಗಿಯೇ ವಾಲಂಟರಿ ಆಧರದಲ್ಲಿ ಜ್ಯಾರಿ ಮಾಡಲು ಒಪ್ಪಿದ್ದಾರೆ. ಇದಕ್ಕೆ ಅಗತ್ಯವಿರುವ ಎಲ್ಲಾ ಸಹಕಾರಗಳನ್ನು ನೀಡಲು ಮತ್ತು ಮಂಗಳೂರಿನ ಪ್ರಾವಿಡೆಂಟ್ ಫಂಡ್ ಕಚೇರಿಗೆ ಈ ನಿಟ್ಟಿನಲ್ಲಿ ಬರುವ ಭಾರೀ ಪ್ರಮಾಣದ ಕೆಲಸವನ್ನು ಸೂಕ್ತ ವಾಗಿ ನಿಭಾಯಿಸಲು ಬೇಕಾಗುವ ವಿಶಾಲ ಕಟ್ಟಡ, ಸಿಬ್ಬಂದಿ ಇತ್ಯಾದಿ ವ್ಯವಸ್ಥೆಗಳನ್ನು ಮಾಡಲು ಕೂಡಲೇ ಕ್ರಮಕೈಗೊಳ್ಳುವುದಾಗಿ ಪ್ರಾವಿಡೆಂಟ್ ಕಮಿಶನರರೂ ಒಪ್ಪಿದ್ದಾರೆ.

ಕಳೆದ ವರ್ಷಗಳಿಂದ ಪ್ರಾವಿಡೆಂಟ್ ಫಂಡಿಗಾಗಿ ಬೀಡಿ ಕಾರ್ಮಿಕರಿಂದ ಸಂಗ್ರಹಿಸಿ ಅಮಾನತ್ತಿನಲ್ಲಿ ಇರಿಸಲಾದ ಹಣವನ್ನು ಸಂಬಂಧಪಟ್ಟ ಕಾರ್ಮಿಕರ ಹೆಸರಿನಲ್ಲಿ ಪ್ರೊವಿಡೆಂಟ್ ಫಂಡ್ ಖಾತೆ ಗಳಿಗೆ ಜಮೆಮಾಡಿ ಕಾರ್ಮಿಕರಿಗೆ ರಶೀದಿ ಕೊಡಬೇಕೆಂದು ಒತ್ತಾಯಿಸಿ ಸಿ.ಐ.ಟಿ.ಯು. ನೇತೃತ್ವದ ದ.ಕ. ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಶನ್ನಿನ ಮುಂದಾಳುಗಳಾದ ಕಾಂ| ಯು. ಬಿ. ಲೋಕಯ್ಯ, ಜೆ. ಬಾಲಕೃಷ್ಣಶೆಟ್ಟಿ, ಗಂಗಾಧರ ಗಟ್ಟಿ, ಸದಾಶಿವ ಕಾರ್ಪೆಂಟರ್, ವಾಸುದೇವ ಆಚಾರ್, ಜಯಂತ ನಾಯಕ್ ಮತ್ತು ರಾಮರಾಯ ಶೆಣೈ ಇವರು ಜೂನ್ 16 ರಿಂದ ಜಿಲ್ಲಾಧಿಕಾರಿಯವರ ಕಚೇರಿಯ ಮುಂದೆ ನಡೆಸುತ್ತಿದ್ದ ಅನಿರ್ದಿಷ್ಟಾವಧಿಯ ಅನ್ನ ಸತ್ಯಾಗ್ರಹವನ್ನು, ಬೇಡಿಕೆಗಳು ಈಡೇರಿದ ತೃಪ್ತಿಯೊಂದಿಗೆ ಜೂನ್ 21 ರಂದು ರಾತ್ರಿ 10 ಗಂಟೆಗೆ ಮುಕ್ತಾಯಗೊಳಿಸಲಾಯಿತು. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ದ. ಕ. ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ| ಕೆ. ಆರ್. ಶ್ರೀಯಾನ್ ಅವರು ನೀಡಿದ ಮೂಸಂಬಿ ರಸವನ್ನು ಸೇವಿಸಿ, ನೆರೆದ ಸಹಸ್ರಾರು ಕಾರ್ಮಿಕರ ಜಯ ಘೋಷಣೆಗಳೊಂದಿಗೆ ಸತ್ಯಾಗ್ರಹಿಗಳು ಉಪವಾಸವನ್ನು ಕೊನೆಗೊಳಿಸಿದರು. ಸಿ.ಐ.ಟಿ.ಯು.ವಿನ ದ. ಕ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ| ಕೆ. ಮೂಸಬ್ಬನವರು ಸತ್ಯಾಗ್ರಹಿಗಳಿಗೆ ಹಾರಾರ್ಪಣೆ ಮಾಡಿದರು. ಹಲವಾರು ಮಂದಿ ಕಾರ್ಮಿಕರೂ ಸತ್ಯಾಗ್ರಹಿಗಳಿಗೆ ಹಾರಾರ್ಪಣೆ ಮಾಡಿದರು.

ವಿಜಯೋತ್ಸವವನ್ನು ಆಚರಿಸಲು ಸತ್ಯಾಗ್ರಹದ ಶಿಬಿರದ ಮುಂದೆ ಕಿಕ್ಕಿರಿದು ನೆರೆದಿದ್ದ ಭಾರೀ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಕಾಂ| ಕೆ. ಆರ್. ಶ್ರೀಯಾನ್ ವಹಿಸಿದ್ದರು. ಜಿಲ್ಲಾ ಸಿ.ಐ.ಟಿ.ಯು. ಅಧ್ಯಕ್ಷ ಕಾಂ| ಬಿ. ರಾಮಚಂದ್ರರಾವ್ ಅವರು ಒಪ್ಪಂದದ ಮುಖ್ಯ ಅಂಶಗಳನ್ನು ವಿವರಿಸಿ, ಪ್ರಚಂಡ ಯಶಸ್ಸಿನಲ್ಲಿ ಮುಕ್ತಾಯವಾದ ಈ ಧೀರ ಹೋರಾಟಕ್ಕಾಗಿ ಬೀಡಿ ಕಾರ್ಮಿಕರನ್ನು ಅಭಿನಂದಿಸಿದರು. ಬೀಡಿ ಕಾರ್ಮಿಕರ ಮುಂದಾಳು ಕಾಂ| ಎಚ್. ಗೋಪಾಲರವರೂ ಭಾಷಣ ಮಾಡಿದರು. ಕೊನೆಯಲ್ಲಿ ಜಿಲ್ಲಾ ಸಿ.ಐ.ಟಿ.ಯು. ಕಾರ್ಯದರ್ಶಿ ಕಾಂ| ಕೆ. ಮೂಸಬ್ಬನವರು ವಂದನಾರ್ಪಣೆ ಮಾಡಿದರು.

ಆರು ದಿನಗಳ ತನಕ ನಡೆದ ಅನಿರ್ದಿಷ್ಟಾವಧಿಯ ಅನ್ನ ಸತ್ಯಾಗ್ರಹ ಮತ್ತು ಜಿಲ್ಲೆಯ ಎರಡೂವರೆ ಲಕ್ಷ ಬೀಡಿ ಕಾರ್ಮಿಕರು ಎಂಟು ದಿನಗಳ ತನಕ ನಡೆಸಿದ ಧೀರ ಹೋರಾಟವು ಬೀಡಿ ಕಾರ್ಮಿಕರ ಹೋರಾಟದ ಚರಿತ್ರೆಯಲ್ಲೇ ಅತ್ಯಂತ ಅಮೋಘವಾದ ಹೋರಾಟವಾಗಿದ್ದು, ಈ ಚಾರಿತ್ರಿಕ ಹೋರಾಟ ಮತ್ತು ವಿಜಯಕ್ಕಾಗಿ ದಕ್ಷಿಣ ಕನ್ನಡ ಜಿಲ್ಲೆಯ ಬೀಡಿ ಕಾರ್ಮಿಕರನ್ನೂ, ಹೋರಾಟದಲ್ಲಿ ಸರ್ವರೀತಿಯ ಬೆಂಬಲ ಮತ್ತು ಸಹಕಾರವನ್ನಿತ್ತ ಎಲ್ಲಾ ಕಾರ್ಮಿಕ ಸಂಘಗಳನ್ನೂ ಕಾರ್ಯಕರ್ತರನ್ನೂ ಜಿಲ್ಲಾ ಸಿ.ಐ.ಟಿ.ಯು. ಕಾರ್ಯದರ್ಶಿ ಕಾಂ| ಕೆ. ಮೂಸಬ್ಬನವರು ಹೃತ್ಪೂರ್ವಕವಾಗಿ ಅಭಿನಂದಿಸಿದ್ದಾರೆ.

○

ರಾಷ್ಟ್ರಪತಿ ಚುನಾವಣೆ

ಜುಲೈನಲ್ಲಿ ನಡೆಯಲಿರುವ ರಾಷ್ಟ್ರಪತಿ ಚುನಾವಣೆಯಲ್ಲಿ ವಿರೋಧ ಪಕ್ಷಗಳು ಸುಪ್ರೀಂ ಕೋರ್ಟ್‌ನ ಮಾಜೀ ನ್ಯಾಯಾಧೀಶ ಶ್ರೀ ಎಚ್. ಆರ್. ಖನ್ನಾ ಅವರನ್ನು ಅಭ್ಯರ್ಥಿಗಳನ್ನಾಗಿ ನಿಲ್ಲಿಸಿವೆ. ಶ್ರೀ ಜೈಲ್ ಸಿಂಗ್ ಕಾಂಗ್ರೆಸ್ಸಿನ ಅಭ್ಯರ್ಥಿಯಾಗಿದ್ದಾರೆ. ಹರೀನ್ ಮುಖರ್ಜಿಯವರನ್ನು ವಿರೋಧ ಪಕ್ಷಗಳು ಈ ಮುನ್ನ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದ್ದವು. ಅವರ ಹೆಸರು ಮತದಾರ ಪಟ್ಟಿಯಲ್ಲಿ ಇಲ್ಲದ ಕಾರಣ ಅವರ ಹೆಸರನ್ನು ಕೈಬಿಡಲಾಯಿತು. ಈಗ ಶ್ರೀ ಖನ್ನಾ ಮತ್ತು ಜೈಲ್‌ಸಿಂಗ್ ನಡುವೆ ನೇರ ಸ್ಪರ್ಧೆ ನಡೆಯುವುದು ಖಚಿತವಾದಂತಾಗಿದೆ.

ವಿರೋಧ ಪಕ್ಷದವರೊಡನೆ ಸಮಾಲೋಚನೆ ನಡೆಸಿ ಸರ್ವಸಮ್ಮತ ಪಡೆಯಲು ಪ್ರಯತ್ನಿಸಬೇಕೆಂದು ಕಾಂಗ್ರೆಸ್ಸೇತರ ಪಕ್ಷಗಳು ತಮ್ಮ ಅಭಿಪ್ರಾಯವನ್ನು ಪ್ರಧಾನಿಯವರಿಗೆ ತಿಳಿಸಿದ್ದವು. ಈ ಸೂಚನೆಯನ್ನು ಪ್ರಧಾನಿ ನಿರಾಕರಿಸಿದ್ದಾರೆ.

ತನ್ನ ಇಚ್ಛಾನುಸಾರ ರಬ್ಬರ್ ಸ್ಟ್ಯಾಂಪ್‌ನಂತೆ ವರ್ತಿಸುವ ವ್ಯಕ್ತಿಯೊಬ್ಬನನ್ನು ರಾಷ್ಟ್ರಪತಿಯನ್ನಾಗಿ ಚುನಾಯಿಸಲು ಪ್ರಧಾನಿ ಇಂದಿರಾ ಸನ್ನಾಹ ನಡೆಸಿದ್ದಾರೆ. ಪ್ರಜಾಸತ್ತೆಗೆ ಮಾರಕವಾಗುವ ಈ ಬಗೆಯ ಸನ್ನಾಹವನ್ನು ಸೋಲಿಸುವುದು ಅತ್ಯಗತ್ಯ.

●

ಉತ್ಪಾದಕತೆಯ ಸಭೆಗೆ ಕೇಂದ್ರ ಕಾರ್ಮಿಕ ಸಂಘಟನೆಗಳ ಬಹಿಷ್ಕಾರ

ಜೂನ್ 15 ರಂದು ದೆಹಲಿಯಲ್ಲಿ ನಡೆದ ಉತ್ಪಾದಕತೆಯ ಸಭೆ (ಗೌರ್ನ್ಮೆಂಟ್ ಪ್ರೊಡಕ್ಟ್‌ವಿಟಿ ಮೀಟ್) ಯನ್ನು ರಾಷ್ಟ್ರೀಯ ಚಳುವಳಿ ಸಮಿತಿ (ಎನ್. ಸಿ. ಸಿ.)ಯ ಅಂಗವಾಗಿರುವ ಕೇಂದ್ರ ಕಾರ್ಮಿಕ ಸಂಘಟನೆಗಳು ಬಹಿಷ್ಕರಿಸಿವೆ.

ಕಾರ್ಮಿಕ ಸಚಿವಾಲಯದ ಕಾರ್ಯದರ್ಶಿ ಶ್ರೀ ಬಿ. ಜಿ. ದೇಶ್‌ಮುಖ್ ಅವರು ಈ ಸಭೆಯ ಅಧ್ಯಕ್ಷತೆ ವಹಿಸುವವರಿದ್ದರು.

ಕಾರ್ಮಿಕ ಸಚಿವಾಲಯದ ಕಾರ್ಯದರ್ಶಿಯವರಿಗೆ ಎ.ಐ.ಟಿ.ಯು.ಸಿ., ಸಿ.ಐ.ಟಿ.ಯು., ಎಚ್.ಎಂ.ಎಸ್., ಯು.ಟಿ.ಯು.ಸಿ. (ಎಲ್ — ಎಸ್) ಬಿ.ಎಂ.ಎಸ್., ಯು.ಟಿ.ಯು.ಸಿ. ಮತ್ತು ಟಿ. ಯು. ಸಿ. ಸಿ. ಗಳು ಜಂಟಿಯಾಗಿ ಪತ್ರವೊಂದನ್ನು ಬರೆದು, ಕಾರ್ಮಿಕ ಮಂತ್ರಿ ಆಶ್ವಾಸನೆ ನೀಡಿದಂತೆ ಕಾರ್ಮಿಕ ಸಂಘಟನೆಗಳೊಂದಿಗೆ ಚರ್ಚಿಸದೆ, ಕಳೆದ ಸಂಸತ್ ಅಧಿವೇಶನ ನಡೆಯುತ್ತಿರುವಾಗ ನಾಲ್ಕು ಕಾರ್ಮಿಕ ವಿರೋಧಿ ಮಸೂದೆಗಳನ್ನು ಮಂಡಿಸಿದ್ದರ ಕುರಿತು ತೀವ್ರವಾಗಿ ಖಂಡಿಸಿವೆ. ಕಾರ್ಮಿಕ ಕಾನೂನಿಗೆ ತಿದ್ದುಪಡಿ ತರುವ ವಿಷಯ ಇಂಡಿಯನ್ ಲೇಬರ್ ಕಾನ್‌ಫರೆನ್ಸ್‌ನ ಅಜೆಂಡಾನಲ್ಲಿ ಇದ್ದು, ಈ ಕಾನ್‌ಫರೆನ್ಸನ್ನು ಸರಕಾರವೇ ಎರಡು ಬಾರಿ ವಿನಾಕಾರಣ ಮುಂದೂಡಿದೆ.

ಕಾರ್ಮಿಕರ ಮುಷ್ಕರದ ಹಕ್ಕನ್ನು ಹತ್ತಿಕ್ಕಲು ಎನ್. ಎಸ್. ಎ. ಮತ್ತು ಎಸ್ಮಾಗಳನ್ನು ಬಳಸುತ್ತಿರುವುದರ ವಿರುದ್ಧವೂ ಕೇಂದ್ರ ಕಾರ್ಮಿಕ ಸಂಘಟನೆಗಳು ಪ್ರತಿಭಟಿಸಿವೆ.

ಈ ಕೂಡಲೇ ಇಂಡಿಯನ್ ಲೇಬರ್ ಕಾನ್‌ಫರೆನ್ಸನ್ನು ಸಮಾವೇಶಗೊಳಿಸಲೂ ಕೇಂದ್ರ ಕಾರ್ಮಿಕ ಸಂಘಟನೆಗಳು ಒತ್ತಾಯಿಸಿವೆ.

ಸಂಸತ್ ಅಧಿವೇಶನ ಪ್ರಾರಂಭವಾಗಲಿರುವ ಜುಲೈ ಎಂಟರಂದು ಸಂಸತ್ ನೆದುರು ಮತ್ತು ಕೈಗಾರಿಕಾ ಕೇಂದ್ರಗಳಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಲು ರಾಷ್ಟ್ರೀಯ ಚಳುವಳಿ ಸಮಿತಿಯು ತೀರ್ಮಾನಿಸಿದೆ.

○

——ಹಸಿದ ಕಣ್ಗಳಿಂದ——

ಮುಳ್ಳಾಗಿ ಅರಳುವ ಮಕ್ಕಳು

ಅರಳುವ ಮಕ್ಕಳ ಮನಸ್ಸು ಹೂವಿಗಿಂತ ಮೃದು.

ಆದರೆ ನಮ್ಮಲ್ಲಿ ಅರಳುವ ಮಕ್ಕಳ ಬೆಳವಣಿಗೆ ಯಾವ ಬಗೆಯದು ?

ಬದುಕಿನಿಂದ ಅನಾಥರಾದ ಮಕ್ಕಳು ಬೀದಿಗಳಲ್ಲಿ, ಹೋಟೆಲ್‌ಗಳಲ್ಲಿ, ಕಾರ್ಖನೆಗಳಲ್ಲಿ ಹಿಡಿ ಕೂಳಿಗಾಗಿ ಮುಳ್ಳುಗಳಂತೆ ಅರಳುತ್ತಿದ್ದಾರೆ ಭವಿಷ್ಯದ ಗುರಿಯಿಲ್ಲದೆ.

ಬದುಕನ್ನು ಹೆಗಲೇರಿಸಿಕೊಂಡ ಮಕ್ಕಳು ಬಂದೀಖಾನೆಗಳಂಥ ಶಾಲೆಗಳಲ್ಲಿ ಗುಲಾಮ ಶಿಕ್ಷಣದ ಉಸಿರಿನಲ್ಲಿ ಬೆಳೆಯುತ್ತಿದ್ದಾರೆ. ಈ ಕುರಿತು ನಮ್ಮ ಸರಕಾರ ಬಾಯಿಗೆ ಬಟ್ಟೆ ಕಟ್ಟಿಕೊಂಡು ಮೌನವಾಗಿದೆ. ಯಾಂತ್ರಿಕ ಜೀವನದ ಚಕ್ರಕ್ಕೆ ಸಿಕ್ಕು ಮಕ್ಕಳ ಮನಸ್ಸು ಹಾಳಾಗುತ್ತದೆ. ಅವರ "ಹಾಳು" ತನಕ್ಕೆ ನಮ್ಮ ಶಿಕ್ಷಣ ಪದ್ಧತಿ ಎಂದು ಎಲ್ಲರು ಒಪ್ಪಿಕೊಳ್ಳುತ್ತಾರೆ. ಆದರೆ ಈ ಬಗ್ಗೆ ಸರಿಯಾಗಿ ಆಲೋಚನೆಯೂ ನಡೆಯುತ್ತಿಲ್ಲ.

ಈ ಕಾರಣಕ್ಕಾಗಿಯೇ ಏನೋ ನಮ್ಮ ಇಡೀ ಶಿಕ್ಷಣ ಸಮೂಹಗಳು ವ್ಯಾಪಾರ ಕೇಂದ್ರಗಳಾಗಿವೆ. ಖರೀದಿಸುವ ಶಿಕ್ಷಣ, ಡಿಗ್ರಿ, ಅರಳುವ ಮಕ್ಕಳ ಬಾಳನ್ನು ಹಾಳು ಮಾಡುವುದರಲ್ಲಿ ಯಾವ ಸಂದೇಹವಿಲ್ಲ.

ಇಂಥ ಶಿಕ್ಷಣದ ಕೊಳೆಯಲ್ಲಿ ಕೊಳೆಯುವ ಮಕ್ಕಳು ಮುಂದಿನ ಭಾವೀ ನಾಗರೀಕರು !

ಅನ್ನಕ್ಕಾಗಿ, ಬದುಕಿಗಾಗಿ, ಕೆಲಸಕ್ಕಾಗಿ ಇನ್ನೊಬ್ಬರ ಮುಂದೆ ಕೈ ಚಾಚುವ ಅಸಾಹಯಕತನ ಸಹಸ್ರಾರು ಜನರನ್ನು ಕಾಡುತ್ತಿದೆ.

●

ಬೀದಿ ಬದಿಯ ಜನ

ನಾವು-ನೀವು ನೋಡಿರುತ್ತೇವೆ ಇವರನ್ನು. ದೊಡ್ಡ ನಗರದ ಬೀದಿಗಳಲ್ಲಿ ಹಸಿದ ಒಡಲನ್ನು ಹೊತ್ತುಕೊಂಡು ನೆಲ-ಆಕಾಶವೇ ಮನೆ ಮಾಡಿಕೊಂಡು ಬದುಕುವ ಜನರನ್ನು.

ಮುಗಿಲೇರುವ ಮಹಡಿಗಳ ಕೆಳಗೆ, ಹುಲ್ಲು ಗುಡಿಸಲುಗಳಲ್ಲಿ ದಿನ ದೂಡುದ ಜನ. ಮಳೆ-ಗಾಳಿಗೆ ಮೈ ಒಡ್ಡಿ ಮಕ್ಕಳು ಮರಿಗಳೊಂದಿಗೆ ಅಂಗಡಿ, ಹೋಟೆಲುಗಳ ಸೂರುಗಳ ಕೆಳಗೆ ಉಸಿರಾಡುವ ಜನರನ್ನು ದಿನ ನಿತ್ಯ ನೋಡುತ್ತಿದ್ದೇವೆ. ಮಾನವೀಯ ಅನುಕಂಪದ ಮೌನದ ನಗೆಯಲ್ಲಿ ಎಲ್ಲವನ್ನು ಮರೆತುಬಿಡಲಾಗುತ್ತಿದೆ.

ಯಾಕೆ ಹೀಗೆ...? ಭ್ರಷ್ಟ ಸಂಸ್ಕೃತಿಯ ಶ್ರೀಮಂತಿಕೆಯಲ್ಲಿ ನಾವು ಏನಾಗುತ್ತಿದ್ದೇವೆ ? ದುಡಿವ ಈ ಜನರ ಬದುಕಿಗೆ ಒಂದು ಮನೆಯಿಲ್ಲ. ನಿಲ್ಲಲ್ಲು ನೆಲೆಯಿಲ್ಲ.

ಇಂಥ ಅಲೆಮಾರಿಗಳ ಅನಾಥತೆ ಅಸಾಹಾಯಕತೆಯನ್ನು ನೋಡಿಯೂ ಈ ಸರಕಾರ ಯಾಕೆ ಕಣ್ಣು ಮುಚ್ಚಿಕೊಂಡಿದೆ ? ಅವರ ಗೋರಿಯ ಮೇಲೆ ಸಿಂಹಾಸನ ಅಲಂಕರಿಸುವ ಜನ ಇದಕ್ಕೆ ಉತ್ತರಕೊಡಬೇಕು.

ಸಂಪಾದಕೀಯ

(1ನೇ ಪುಟದಿಂದ)

ಕಮ್ಯುನಿಸ್ಟ್ ಪಕ್ಷ ಖಂಡಿಸುತ್ತ ಬಂದಿದೆಯಲ್ಲದೆ, ಈ ಪ್ರವೃತ್ತಿಯ ಗಂಡಾಂತರದ ಕುರಿತು ಜನತೆಯನ್ನೂ ಎಚ್ಚರಿಸುತ್ತಾ ಬಂದಿದೆ.

ರಾಜ್ಯ ಸಭೆ ಮತ್ತು ವಿಧಾನ ಪರಿಷತ್ತಿನ ಚುನಾವಣೆಗೆ ಕಾಂಗ್ರೆ ಉಮೇದುವಾರರನ್ನು ಆರಿಸಿರುವ ಪದ್ಧತಿಯನ್ನು ಪ್ರತಿಭಟಿಸಿ ಕೆ. ಟಿ. ರಾಠೋಡರವರು ತನ್ನ ಅಧ್ಯಕ್ಷ ಸ್ಥಾನಕ್ಕೆ ಈ ರಾಜೀನಾಮೆ ಕೊಟ್ಟಿದ್ದರು. ಅದನ್ನು ಸ್ವೀಕರಿಸದೆ, ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಯಬೇಕೆಂದು ಆದೇಶ ನೀಡಿದ ಇಂದಿರಾ ಗಾಂಧಿಯವರೇ ಕೆಲವೇ ದಿವಸದ ನಂತರ ಯಾವ ಪದ್ಧತಿ, ಮಾನ ಮರ್ಯಾದೆ ಇಲ್ಲದೆ ರಾಠೋಡರನ್ನು ಪದಚ್ಯುತಿ ಗೊಳಿಸಿರುವುದು ಅತ್ಯಂತ ನಾಚಿಕೆಗೇಡಿನ ಕೆಲಸವಾಗಿದೆ- ಇದರಿಂದಾಗಿ ಮುಖ್ಯ ಮಂತ್ರಿ ಗುಂಡೂರಾಯರಿಗೂ, ಅವರು ನಡೆಸುತ್ತಿರುವ ಏಕ ವ್ಯಕ್ತಿ ಆಡಳಿತೆಗೂ ಸ್ಫೂರ್ತಿ ದೊರೆತಂತಾಗಿದೆ.

ಪ್ರಜಾಪ್ರಭುತ್ವದ ಬಗ್ಗೆ ಯೋಚಿಸುವ ಕೆಲವರಾದರೂ ಕಾಂಗ್ರೆಸ್ಸಿನಲ್ಲಿ ಇದ್ದಲ್ಲಿ ಅವರು ಈ ಬೆಳವಣಿಗೆಯ ಬಗ್ಗೆ ಗಂಭೀರವಾಗಿ ಚಿಂತಿಸಬೇಕು.

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053. Editorial and managerial office :L-56, K. V. Temple Street ,Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR : M. K. BHAT.